ಸಂಪುಟ : 9 ಸಂಚಿಕೆ 168 ಪುಟ : 4 ಬೆಲೆ: 3.00 ಶುಕ್ರವಾರ ಆಗಸ್ಟ್ 9 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 168 Pages : 4 Price : 3.00 Friday August 9 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಇಂದಿನ ನೀರು ಪೂರೈಕೆ ವಿವರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಆಗಸ್ಟ್ 9ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು ಎಂದು ನಗರಸಭೆ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳಗಳ ವಿವರ : ವಾರ್ಡ್ ನಂ. 22 ಗಂಗಿಮಡಿ 2000, 1400, 800, 1600 ಮನೆಗಳ ಲೈನ್, ಮಸೂತಿ ಭಾಗಗಳು, ಉಳಿದ ಕೆಲವು ಭಾಗಗಳು. ವಾರ್ಡ್ ನಂ. 30, 34 ವಡ್ಡರಗೇರಿ 46 ಪ್ಲಾಟ್, ಕುಂಚಿ ಕೊರವರ ಓಣಿ, ಮೂರು ಶಿಳ್ಳಿನ ವಕಾರ, ಡಿಪೋ ಹಿಂದಿನ ಭಾಗ, ಶಿವಾನಂದ ಗಾರ್ಡನ್, ಬಸವೇಶ್ವರ ಶಾಲೆಯ ಹಿಂದಿನ ಭಾಗ 1,2,3 ನೇ ಕ್ರಾಸ್, ನೀಲಮ್ಮ ತಾಯಿ ಮಠದ ಲೈನ್, 15 ನಂಬರ್ ಶಾಲೆ ಮುಳಗುಂದ ರಸ್ತೆ, ಉಳಿದ ಕೆಲವು ಭಾಗಗಳು.

ವಾರ್ಡ್ ನಂ. 7 ಪೆಂಡಾರ ಓಣಿ, ಮಲ್ಲೇಶಪ್ಪನ ಲೈನ್, ನಂದರಗಿರವರ ಲೈನ್, ಗಚ್ಚಿಯವರ ಲೈನ್, ಪಿಂಡಕೂರ ರವರ ಲೈನ್, ಅಬ್ಬಿಗೇರಿ ಲೈನ್, ಬಚ್ಚಲಕ್ಕಮ್ಮನ ಗುಡಿ ಲೈನ್, ಚೆನ್ನೇಗೌಡರ ಓಣಿ, ಹುಚ್ಚನ ಗೌಡ್ರ ಓಣಿಯ ಕೆಲವು ಉಳಿದ ಭಾಗಗಳು.

ವಾರ್ಡ್ ನಂ. 29 ಹೊಸ ಹುಡ್ಕೋ ಉಳಿದ ಕೆಲವು ಭಾಗಗಳು. ವಾರ್ಡ್ ನಂ. 24, 25, 19 ಹಾಳದಿಬ್ಬ ಭಾಗ -1,2,3, ಅಬ್ಬಿಗೇರಿ ಲೈನ್, ಕರುಗಲ್ಲ, ಜೀರ ಓಣಿ, ಹನುಮಾನ ಗರಡಿ, ಕುರುಬರ ಗರಡಿ, ಪುಣೇಕರ ಲೈನ್, ಜಿ ಎಸ್ ಹಿರೇಮಠ್ ಲೈನ್, ಜವಳಿ ಬಜಾರ್, ಬಾಬು ಸುಭಾನಿ ಕಟ್ಟಿ, ಗಣಪತಿ ಗುಡಿ, ಖಾನ ತೋಟ ಭಾಗ-3 ಉಳಿದ ಕೆಲವು ಭಾಗಗಳು. ವಾರ್ಡ್ ನಂ. 12, 13 ಕಾರ್ಕಳ, ಮುಧೋಳ, ಜಾಧವರ, ಅಗಸರ, ತೋಪಿಯವರ, ಅಂಗಡಿಯವರ, ಶಿವನಗುತ್ತಿ, ಗೋಡಬೋಲೆ ಡಾಕ್ಟರ್ ಲೈನ್, ಗಣೇಶ ಗುಡಿ ಲೈನ್, ಉಳಿದ ಕೆಲವು ಭಾಗಗಳು.

ತುಂಗಭದ್ರಾ ನದಿಯಿಂದ ಪೂರೈಕೆ ಮಾಡಿದ ನೀರನ್ನು ಸಂಗ್ರಹಣೆ ಮಾಡಿದ ನಂತರ ಹೊಸ ನೀರು ಸಂಗ್ರಹವಾಗಿರುವುದರಿಂದ ಕಡ್ಡಾಯವಾಗಿ ಕಾಯಿಸಿ ಆರಿಸಿ ಕುಡಿಯಲು ಉಪಯೋಗಿಸತಕ್ಕದ್ದು ಎಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪಿ.ಲಂಕೇಶ್ ಕೃತಿಗಳ ಅಧ್ಯಯನ ಶಿಬಿರ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕನ್ನಡ ಜಾಣ-ಜಾಣೆಯರ ವೇದಿಕೆ ಬೆಂಗಳೂರು ಇವರ ಸಹಯೋಗದಲ್ಲಿ 2024ರ ಸೆಪ್ಟೆಂಬರ್ ಕೊನೆಯ ವಾರದಲ್ಲಿ ಹಾಸನ ಜಿಲ್ಲೆಯಲ್ಲಿ ರಾಜ್ಯ ಮಟ್ಟದ ಮೂರು ದಿನಗಳ ಪಿ.ಲಂಕೇಶ್ ಕೃತಿಗಳ ಅಧ್ಯಯನ ಶಿಬಿರವನ್ನು ನಡೆಸಲು ಉದೇಶಿಸಿದ್ದು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತಿಯಿರುವ 20ರಿಂದ 40 ವರ್ಷ ವಯೋಮಿತಿಯ ರಾಜ್ಯದ ಎಲ್ಲ ಭಾಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಆಗಸ್ಟ್ 17 ಕೊನೆಯ ದಿನವಾಗಿದ್ದು, ಅರ್ಜಿ ಹಾಗೂ ಹೆಚ್ಚಿನ ಮಾಹಿತಿಗಾಗಿ http://karnatakasahithyaacademy.org ಯಿಂದ ಅರ್ಜಿ ನಮೂನೆ ಹಾಗೂ ವಿವರಗಳನ್ನು ಪಡೆಯಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಜಿಲ್ಲೆಯ ಪ್ರವಾಸಿ ತಾಣಗಳ ಆಯ್ಕೆಗೆ ಅವಕಾಶ

■ವಿಜಯಸಾಕ್ಷಿ ಸುದ್ದಿ, ಗದಗ

ಪ್ರವಾಸೋದ್ಯಮವನ್ನು ಇನ್ನಷ್ಟು ಮೇಲ್ದರ್ಜೆಗೇರಿಸಲು ಹಾಗೂ ಧಾರ್ಮಿಕ, ಸಾಂಸ್ಕೃತಿಕ, ಪಾರಂಪಾರಿಕ, ನೈಸರ್ಗಿಕ ಹಾಗೂ ವನ್ಯಜೀವಿ ಮತ್ತು ಸಾಹಸ ಚಟುವಟಿಕೆಗಳು ಹಾಗೂ ಇತರೆ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ದೃಷ್ಟಿಕೋನದಲ್ಲಿ ಪ್ರಮುಖ ಪ್ರವಾಸಿ ತಾಣಗಳನ್ನು ಗುರುತಿಸಿ ವಿಶ್ವದರ್ಜೆಯಲ್ಲಿ ಅಭಿವೃದ್ಧಿಪಡಿಸಲು ಕೇಂದ್ರ ಪ್ರವಾಸೋದ್ಯಮ ಸಚಿವಾಲಯದಿಂದ ದೇಖೋ ಅಪನಾ ದೇಶ; ಪೀಪಲ್ಸ್ ಚಾಯ್ಸ್-2024ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ.

ಈ ಕಾರ್ಯಕ್ರಮದ ಭಾಗವಾಗಿ ನಾಗರಿಕರು/ಪ್ರವಾಸಿಗರು ಆದ್ಯತೆಯ ಪ್ರವಾಸಿ ತಾಣಗಳನ್ನು ಆಯ್ಕೆ ಮಾಡಲು ಅವಕಾಶ ಒದಗಿಸಲಾಗಿದೆ. ನಾಗರಿಕರು/ಪ್ರವಾಸಿಗರು ಆದ್ಯತೆಯ ಪ್ರವಾಸಿ ತಾಣಗಳನ್ನು ಆಯ್ಕೆ ಮಾಡಲು ಸೆಪ್ಟೆಂಬರ್ 14ರವರೆಗೆ ವೋಟ್ ಮಾಡುವ ಅವಕಾಶ ನೀಡಲಾಗಿದೆ. ಕರ್ನಾಟಕ ರಾಜ್ಯದ ಗದಗ ಜಿಲ್ಲೆಯ ಪ್ರವಾಸಿ ತಾಣಗಳನ್ನು ಆದ್ಯತಾ ಪ್ರವಾಸಿತಾಣಗಳನ್ನಾಗಿ ಆಯ್ಕೆಎಗೊಳ್ಳುವಂತೆ ಮಾಡಲು https://innovateindia.mygov.in/dekho-apna-desh/ ಲಿಂಕ್‌ನಲ್ಲಿ ಗದಗ ಜಿಲ್ಲೆಯ ಪ್ರವಾಸಿ ತಾಣಗಳನ್ನು ವೋಟ್ ಮಾಡಬಹುದಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ್ವರ ವಿಭೂತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಸವ ಪಂಚಮಿ ಆಚರಣೆ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಮಹಾಮಾನವತಾವಾದಿ, ಜಗಜ್ಯೋತಿ, ಕರ್ನಾಟಕದ ಸಾಂಸ್ಕೃತಿಕ ನಾಯಕ, ವಿಶ್ವಗುರು ಬಸವಣ್ಣನವರು ಕ್ರಿ.ಶ. 1167ರಂದು ಕಪ್ಪಡಿ ಸಂಗಮನಾಥನಲ್ಲಿ ಶ್ರಾವಣ ಶುದ್ಧ ಪಂಚಮಿಯಂದು ಮಹಾಬಯಲಿನಲ್ಲಿ ಬಯಲ ಸ್ವರೂಪರಾದ ದಿನವನ್ನೇ 'ಬಸವ ಪಂಚಮಿ'ಯನ್ನಾಗಿ ಬಸವ ಭಕ್ತರು, ಬಸವತತ್ವಾನುಯಾಯಿಗಳು ಆಚರಿಸುತ್ತಾ ಬಂದಿದ್ದಾರೆ.

ಆಗಸ್ಟ್ 9, ನಾಗ ಪಂಚಮಿಯ ಮುಂಜಾನೆ 10 ಗಂಟೆಗೆ ಗದುಗಿನ 'ಸ್ಪಂದನಾ' ಕಿವುಡ ಮತ್ತು ಮೂಗ ಮಕ್ಕಳ ವಿಶೇಷ ಪ್ರಾರ್ಥಮಿಕ ಹಾಗೂ ಮಾಧ್ಯಮಿಕ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಹಾಲು-ಬಿಸ್ಕೆಟ್ ವಿತರಿಸಲಾಗುವುದು. ನಂತರ 11 ಗಂಟೆಗೆ ಜಿಲ್ಲಾಸ್ಪತ್ರೆಯ ಒಳರೋಗಿಗಳಿಗೆ ಹಾಲು-ಬಿಸ್ಕೆಟ್ ವಿತರಣೆ, 12 ಗಂಟೆಗೆ ಭೀಷ್ಮ ಕೆರೆಯಲ್ಲಿರುವ ಭವ್ಯವಾದ ಶ್ರೀ ಬಸವೇಶ್ವರ ಮೂರ್ತಿ ಆವರಣದಲ್ಲಿ ಸಾಮೂಹಿಕ ವಚನ ಪ್ರಾರ್ಥನೆ ಜರುಗಲಿದೆ. ಈ ಎಲ್ಲ ಕಾರ್ಯಕ್ರಮಗಳ ಸಾನ್ನಿಧ್ಯವನ್ನು ಪೂಜ್ಯ ಜಗದ್ಗುರು ತೋಂಟದ ಡಾ. ಸಿದ್ಧರಾಮ ಮಹಾಸ್ವಾಮಿಗಳು ವಹಿಸಿಕೊಳ್ಳುವರು.

ಬಸವದಳ-ಬಸವಕೇಂದ್ರ, ಲಿಂಗಾಯತ ಪ್ರಗತಿಶೀಲ ಸಂಘ, ಜಗದ್ಗುರು ತೋಂಟದಾರ್ಯ ಜಾತ್ರಾಮಹೋತ್ಸವ ಸಮಿತಿ, ಶರಣ ಸಾಹಿತ್ಯ ಪರಿಷತ್ತು, ಜಾಗತಿಕ ಲಿಂಗಾಯತ ಮಹಾಸಭೆ ಹಾಗೂ ಬಸವಪರ ಸಂಘಟನೆಗಳ ಸದಸ್ಯರು ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಎಲ್ಲ ಸಂಘಟನೆಗಳ ಪರವಾಗಿ ಪ್ರಕಾಶ ಅಸುಂಡಿ ಹಾಗೂ ಶೇಖಣ್ಣ ಕಳಸಾಪೂರಶೆಟ್ರ ವಿನಂತಿಸಿದ್ದಾರೆ.

### ಲಕ್ಕುಂಡಿ ಸ್ಮಾರಕಗಳ ಕಾಯಕಲ್ಪಕ್ಕೆ ಮುಂದಾದ ಪ್ರವಾಸೋದ್ಯಮ ಇಲಾಖೆ

# 5 ಕೋಟಿ ರೂ ಅನುದಾನದಲ್ಲಿ ಕಾಮಗಾರಿ

■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಕಲ್ಯಾಣ ಚಾಲುಕ್ಯರಸರು ನಿರ್ಮಿಸಿದ ಶಿಲ್ಪಕಲೆಯ ಕೇಂದ್ರವಾದ ಲಕ್ಕುಂಡಿ ಗ್ರಾಮದ ದುಃಸ್ಥಿತಿಯಲ್ಲಿರುವ ಸ್ಮಾರಕಗಳ ಸಂರಕ್ಷಣೆಗಾಗಿ ಪ್ರವಾಸೋದ್ಯಮ ಇಲಾಖೆಯು 5.66 ಕೋಟಿ ರೂ.ಗಳ ವೆಚ್ಚದಲ್ಲಿ ಕಾಮಗಾರಿಯ ನೀಲನಕ್ಷೆಯನ್ನು ಹಾಕಿಕೊಂಡಿದೆ.



ಗದಗ ಜಿಲ್ಲಾ ಕೇಂದ್ರದಿಂದ ಕೇವಲ 12 ಕಿ.ಮೀ ದೂರದಲ್ಲಿರುವ ಲಕ್ಕುಂಡಿ ಗ್ರಾಮವು ದಕ್ಷಿಣ ಭಾರತದ ಶಿಲ್ಪಕಲೆಯ ಮುಕುಟಮಣಿ ಎಂದೇ ಹೆಸರುವಾಸಿಯಾಗಿದೆ. ಆದರೆ ಇಲ್ಲಿಯ ಕೆಲವು ದೇವಾಲಯಗಳು ಮತ್ತು ಕಲ್ಯಾಣಿಗಳ ಅಭಿವೃದ್ಧಿಯ ಇಚ್ಛಾಶಕ್ತಿಯ ಕೊರತೆಯಿಂದ ಸ್ಮಾರಕಗಳಲ್ಲಿರುವ ಕಲೆಯು ಮರೆಮಾಚಿದಂತಾಗಿದೆ.

ಒಂದಾನೊಂದು ಕಾಲದಲ್ಲಿ ಲಕ್ಕುಂಡಿ ಪ್ರಮುಖ ಧಾರ್ಮಿಕ ಹಾಗೂ ಶಿಕ್ಷಣ ಕೇಂದ್ರವಾಗಿ ಪ್ರಾಚೀನ ಘನತೆ-ಗೌರವ, ವೈಭವವನ್ನು ಹೊಂದಿತ್ತು. 101 ದೇವಾಲಯ, ಭಾವಿಗಳು ಇವೆ ಎಂಬ ಐತಿಹ್ಯವನ್ನು ಹೊಂದಿದ್ದು, ಇಲ್ಲಿಯ ಶಿಲ್ಪಕಲೆಯು ಪುರಾತನ ಕಾಲದ ಕಥೆಯನ್ನು ಸಾರುವಂತಿವೆ. ದಾನಚಿಂತಾಮಣಿ ಅತ್ತಿಮಬ್ಬೆ, ಅಜ್ಜಗಣ್ಣ ಮುಕ್ತಾಯಕ್ಕರು ಬಾಳಿ ಬೆಳಗಿದ ಗ್ರಾಮ ಎಂದು ಇತಿಹಾಸದ ಪುಸ್ತಕದಲ್ಲಿ ಓದಿಕೊಂಡು ಗ್ರಾಮಕ್ಕೆ ಆಗಮಿಸುವ ಪ್ರವಾಸಿಗರಿಗೆ ನಿರಾಶೆ ಕಾದಿರುತ್ತದೆ. ಕಾರಣ ಭಾರತೀಯ ಪುರಾತತ್ವ ಇಲಾಖೆಯ ಸುಪರ್ದಿಯಲ್ಲಿರುವ ಕೇವಲ 6 ಸ್ಮಾರಕಗಳ ಸಂರಕ್ಷಣೆ, ಪ್ರಾಚ್ಯವಸ್ತು ಸಂಗ್ರಾಲಯ ಹೊರತುಪಡಿಸಿ ಉಳಿದ ಹತ್ತಾರು ದೇಗುಲ, ಭಾವಿಗಳು ಸಂರಕ್ಷಣೆಯಿಲ್ಲದೇ ಪಾಳು ಬಿದ್ದಿರುವುದನ್ನು ಕಂಡು ಪ್ರವಾಸಿಗರು ಬೇಸರಗೊಂಡು ಸರಕಾರದ ನಿರ್ಲಕ್ಷ್ಯವನ್ನು ದೂರುವುದು ಸಾಮಾನ್ಯವಾಗಿದೆ.


ಲಕ್ಕುಂಡಿ ಸ್ಮಾರಕಗಳ ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈಗಾಗಲೇ ಲಕ್ಕುಂಡಿ ಪಾರಂಪರಿಕ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರವನ್ನು ಪುನರ್ ರಚಿಸುವ ಮೂಲಕ ನೂತನ ಆಯುಕ್ತರನ್ನು ನೇಮಕ ಮಾಡಲಾಗಿದೆ. ಇದರೊಂದಿಗೆ ಇಲ್ಲಿಯವರೆಗೂ ಲಕ್ಕುಂಡಿ ಉತ್ಸವಗಳಲ್ಲಿ ಅಭಿವೃದ್ಧಿಯ ಕುರಿತ ಮಾತುಗಳು ಕೇವಲ ಭರವಸೆಯಾಗಿಯೇ ಉಳಿದಿತ್ತು. ಆದರೆ ಈಗ, ರಾಜ್ಯದ ಪ್ರವಾಸೋದ್ಯಮ, ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ಅಪಾರ ಕಳಕಳಿ ಹೊಂದಿರುವ ಎಚ್.ಕೆ. ಪಾಟೀಲರು ಪ್ರವಾಸೋದ್ಯಮ ಇಲಾಖೆಯ ಸಚಿವರಾದ ನಂತರ ಗ್ರಾಮದ ಬಗ್ಗೆ ವಿಶೇಷ ಕಾಳಜಿವಹಿಸಿ 5 ಕೋಟಿ ರೂ ಅನುದಾನ ಮಂಜೂರು ಮಾಡಿದ್ದು, ಶೀಘ್ರದಲ್ಲಿಯೇ ಕಾಮಗಾರಿಗಳು ಆರಂಭವಾಗಲಿವೆ ಎಂಬ ಸುದ್ದಿ ಇತಿಹಾಸಪ್ರಿಯರಲ್ಲಿ ಸಂತಸ ಮೂಡಿಸಿದೆ.

ಇತಿಹಾಸ ಪ್ರಸಿದ್ಧ ಲಕ್ಕುಂಡಿಯನ್ನು ವಿಶ್ವ ಪರಂಪರೆ ಪಟ್ಟಿಯ ಸ್ಥಾನಮಾನಕ್ಕೇರಿಸಲು ಪ್ರಸ್ತಾವನೆ ಕಳಿಸಲು ಸರಕಾರ ಸಕಲ ಸಿದ್ಧತೆಗಳನ್ನು ಕೈಗೊಂಡಿದೆ. ಈ ನಿಟ್ಟಿನಲ್ಲಿ ಗ್ರಾಮದ ಸ್ಮಾರಕಗಳ ಅಭಿವೃದ್ಧಿಗೆ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲರು ಲಕ್ಕುಂಡಿ ಪಾರಂಪರಿಕ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರದ ಬೇಡಿಕೆಗನುಗುಣವಾಗಿ ಹಂತಹಂತವಾಗಿ ಹಣ ಮಂಜೂರಿ ಮಾಡಲು ವಿಶೇಷ ಕಾಳಜಿ ವಹಿಸಿದ್ದಾರೆ.

**– ಸಿದ್ಧಲಿಂಗೇಶ್ವರ ಪಾಟೀಲ.**
ಪ್ರಾಧಿಕಾರದ ಉನ್ನತ ಸಲಹಾ ಸಮಿತಿಯ ಸದಸ್ಯರು.

ಲಕ್ಕುಂಡಿ ಗ್ರಾಮದಲ್ಲಿನ ಮಜ್ಜನ ಬಾವಿ ಸಂರಕ್ಷಣೆಗೆ 39.38 ಲಕ್ಷ ರೂ, ಈಶ್ವರ ದೇವಾಲಯಕ್ಕೆ 67.98 ಲಕ್ಷ ರೂ, ಕಲ್ಮಠ ಹಾಗೂ ಭಾವಿ ಸಂರಕ್ಷಣೆಗೆ 74.75 ಲಕ್ಷ ರೂ, ಕಣ್ಣೇರ ಭಾವಿ ಸಂರಕ್ಷಣೆಗೆ 54.40 ಲಕ್ಷ ರೂ, ಕೋಟೆ ವೀರಭದ್ರೇಶ್ವರ ದೇಗುಲಕ್ಕೆ 17.87 ಲಕ್ಷ ರೂ, ಲಕ್ಷ್ಮೀನಾರಾಯಣ ದೇಗುಲ ಸಂರಕ್ಷಣೆಗೆ 17.10 ಲಕ್ಷ ರೂ, ಲೆಕ್ಕದ ವೀರಣ್ಣ ದೇಗುಲ ಸಂರಕ್ಷಣೆಗೆ 15.51 ಲಕ್ಷ ರೂ, ಮಾಳಿ ಭಾವಿ ಸಂರಕ್ಷಣೆಗೆ 19.70 ಲಕ್ಷ ರೂ,

ಮಲ್ಲಿಕಾರ್ಜುನ ದೇಗುಲ-18.58 ಲಕ್ಷ ರೂ, ನೀಲಕಂಠೇಶ್ವರ ದೇಗುಲ-91.85 ಲಕ್ಷ ರೂ, ಸಿದ್ದೇಶ್ವರ ದೇಗುಲ-21.40 ಲಕ್ಷ ರೂ, ಸೋಮೇಶ್ವರ ದೇಗುಲ ಹಾಗೂ ಕಪಲಿ ಭಾವಿ-36.10 ಲಕ್ಷ ರೂ, ವಿರೂಪಾಕ್ಷೇಶ್ವರ ದೇಗುಲ-28.38 ಲಕ್ಷ ರೂ ಸೇರಿ ಒಟ್ಟು 13 ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಮುಗಿದಿದೆ. ಇದರೊಂದಿಗೆ 2 ಹೈಟೆಕ್ ಶೌಚಾಲಯಗಳಿಗೂ 50 ಲಕ್ಷ ರೂ ಮಂಜೂರಿ ಮಾಡಿದ್ದು, ಶೀಘ್ರದಲ್ಲಿಯೇ ಪ್ರವಾಸೋದ್ಯಮ ಸಚಿವರಾದ ಎಚ್.ಕೆ. ಪಾಟೀಲ ಅವರು ಭೂಮಿ ಪೂಜೆ ನೆರವೇರಿಸಲಿದ್ದಾರೆ ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಕೊಟ್ರೇಶ್ವರ ವಿಭೂತಿ ತಿಳಿಸಿದ್ದಾರೆ.



### ತಾಲೂಕು ಮಟ್ಟದ ಅಧಿಕಾರಿಗಳ ಸಮನ್ವಯ ಸಭೆಯಲ್ಲಿ ಎಸ್‌ಪಿ ಬಿ.ಎಸ್. ನೇಮಗೌಡ

# ಅಪಘಾತ ರಹಿತ ಸಂಚಾರಕ್ಕೆ ಸಹಕರಿಸಿ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಜಿಲ್ಲೆಯ ಪ್ರಮುಖ ಪಟ್ಟಣ ಹಾಗೂ ತಾಲೂಕು ಕೇಂದ್ರವಾಗಿರುವ ಗಜೇಂದ್ರಗಡದ ಪ್ರಮುಖ ವೃತ್ತ ಹಾಗೂ ರಸ್ತೆಗಳಲ್ಲಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸುವುದರೊಂದಿಗೆ ಸಂಚಾರಿ ನಿಯಮಗಳ ಬಗ್ಗೆ ವಾಹನ ಸವಾರರು ಹಾಗೂ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕಿದೆ. ಈ ಎರಡು ಕಾರ್ಯಗಳು ಸುಗಮವಾಗಿ ನಡೆದರೆ ಅಪಘಾತ ಪ್ರಕರಣಗಳ ಸಂಖ್ಯೆ ಕ್ಷೀಣಿಸುತ್ತದೆ. ಹೀಗಾಗಿ ಲೋಕೋಪಯೋಗಿ ಇಲಾಖೆ, ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು, ತಾಲೂಕು ಮತ್ತು ಸ್ಥಳೀಯ ಮಟ್ಟದ ಆಡಳಿತ ವಿಭಾಗದ ಅಧಿಕಾರಿಗಳ ಸಮರ್ಪಕವಾಗಿ ಕರ್ತವ್ಯ ನಿರ್ವಹಿಸಬೇಕಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ಹೇಳಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಗುರುವಾರ ಸಂಚಾರ ಮತ್ತು ರಸ್ತೆ ಸುರಕ್ಷತಾ ಹಿತದೃಷ್ಟಿಯಿಂದ ತಾಲೂಕು ಮಟ್ಟದ ಅಧಿಕಾರಿಗಳ ಸಮನ್ವಯ ಸಭೆ ನಡೆಸಿ ಅವರು ಮಾತನಾಡಿದರು.



ರಾಷ್ಟ್ರೀಯ ಹೆದ್ದಾರಿ ನಿಯಮಗಳನ್ನು ಸಮರ್ಪಕ ಹಾಗೂ ಕಟ್ಟುನಿಟ್ಟಾಗಿ ಜಾರಿಗೆ ತರಲು ಮುಂದಾಗಬೇಕು. ಸ್ಥಳೀಯ ರಸ್ತೆಗಳ ಪಕ್ಕದಲ್ಲಿರುವ ಪಾದಾಚಾರಿಗಳು ಸಂಚರಿಸುವ ಫುಟ್‌ಪಾತ್‌ಗಳನ್ನು ಸ್ವಚ್ಛವಾಗಿಡಲು ಹಾಗೂ ರಸ್ತೆಯಲ್ಲಿ ವಾಹನ ಓಡಾಟಕ್ಕೆ ತೊಂದ-ರೆಯಾಗದಂತೆ ಬೀದಿ ಬದಿ ವ್ಯಾಪಾರ ನಡೆಸಲು ವ್ಯಾಪಾರಸ್ಥರಿಗೆ ಸೂಚಿಸಬೇಕು. ಪಟ್ಟಣದಲ್ಲಿರುವ ಆಟೋ, ಕಾರ್ ಹಾಗೂ ಟೆಂಪೊಗಳಿಗೆ ಇರುವ ಸ್ಟ್ಯಾಂಡ್‌ಗಳಲ್ಲಿಯೇ ಆಯಾ ವಾಹನಗಳನ್ನು ನಿಲ್ಲಿಸಬೇಕು ಎಂದು ಸೂಚಿಸಿದರು.

ಈ ವೇಳೆ ತಹಸೀಲ್ದಾರ್ ಕಿರಣಕುಮಾರ ಕುಲಕರ್ಣಿ, ಸಿಪಿಐ ಎಸ್.ಎಸ್. ಬೀಳಗಿ, ಆರ್‌ಟಿಓ ವಿಶಾಲ ಪವಾರ, ಪಿಎಸ್‌ಐ ಸೋಮನಗೌಡ ಗೌಡ್ರ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಎನ್. ಕೆ. ಮೂರ್ತಿ, ಗಿರೀಶ, ಪುರಸಭೆ ಪ್ರಭಾರ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ, ಡಾ. ಅನಿಲಕುಮಾರ ತೋಟದ, ಉಮೇಶ ಲಮಾಣಿ, ದಾದಾಖಲಂದರ ಆಶೇಖಾನ, ಜೆ.ಪಿ. ಪೂಜಾರ, ಸಂಗಮೇಶ ಹಲಬಾಗಿಲ ಸೇರಿ ಇತರರು ಇದ್ದರು.


ಸಾರಿಗೆ ಘಟಕದ ವಾಹನಗಳು ಸಹ ನಿಯಮಗಳ ಪಾಲನೆಗೆ ಮುಂದಾಗಬೇಕು. ರಸ್ತೆ ಹಾಗೂ ವೃತ್ತಗಳಲ್ಲಿ ಅಡ್ಡಾದಿಡ್ಡಿಯಾಗಿ ವಾಹನಗಳ ನಿಲುಗಡೆಯಾದರೆ ವಾಹನ ದಟ್ಟಣೆಯಾಗುತ್ತದೆ. ಹೀಗಾಗಿ ವಾಹನಗಳ ಮಾಲಕರು ಮತ್ತು ಚಾಲಕರು ಕಡ್ಡಾಯವಾಗಿ ಸಂಚಾರಿ ನಿಯಮಗಳ ಪಾಲನೆ ಮಾಡಬೇಕು, ವಾಹನಗಳ ಅಗತ್ಯ ದಾಖಲೆಗಳನ್ನು ಹೊಂದಿರಬೇಕು. ಇಲ್ಲದಿದ್ದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಸ್‌ಪಿ ಬಿ.ಎಸ್. ನೇಮಗೌಡ ತಿಳಿಸಿದರು.

# ಗುತ್ತಿಗೆದಾರರ ಬಿಲ್ ಪಾವತಿಗೆ ಕ್ರಮವಹಿಸಿ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಸಿವಿಲ್ ಗುತ್ತಿಗೆದಾರರ ಅಸೋಸಿಯೇಶನ್ ವತಿಯಿಂದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿಯವರಿಗೆ ಶಿರಹಟ್ಟಿಯ ಶ್ರೀ ಫಕೀರೇಶ್ವರ ಸ್ವಾಮಿಗಳಮಠದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಕೆ.ವ್ಹಿ. ಪಾಟೀಲ ಮಾತನಾಡಿ, ಕಳೆದ ಒಂದು ವರ್ಷದಿಂದ ಗುತ್ತಿಗೆದಾರರ ಬಾಕಿ ಬಿಲ್‌ಗಳು ಸರಿಯಾಗಿ ಪಾವತಿ ಆಗುತ್ತಿಲ್ಲ. ಇದರಿಂದ ಎಲ್ಲಾ ಗುತ್ತಿಗೆದಾರರು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದು, ಬ್ಯಾಂಕ್ ಮೂಲಕ ಹಾಗೂ ಖಾಸಗಿ ಸಂಸ್ಥೆಯಿಂದ ಹೆಚ್ಚಿನ ಬಡ್ಡಿ ನೀಡಿ ಹಣ ಹೊಂದಾಣಿಕೆ ಮಾಡಿಕೊಂಡು ಕೆಲಸವನ್ನು ನಿಗದಿತ ಸಮಯದಲ್ಲಿ ಮುಕ್ತಾಯ ಮಾಡಿದರೂ ಸಹ ನಮಗೆ ನಿಗದಿತ ಸಮಯದಲ್ಲಿ ಸಂಪೂರ್ಣ ಹಣ ಪಾವತಿ ಆಗದೆ ಸಾಕಷ್ಟು ತೊಂದರೆ ಅನುಭವಿಸುತ್ತಿದ್ದೇವೆ ಎಂದರು.



ಎಲ್ಲಾ ಶೀರ್ಷಿಕೆಗಳಡಿ ಸುಮಾರು 170 ಕೋಟಿ ರೂ ಬಾಕಿ ಇದ್ದು, ಗುತ್ತಿಗೆದಾರರಿಗೆ ಆರ್ಥಿಕವಾಗಿ ತೊಂದರೆಯಾಗಿದೆ. ಕನಿಷ್ಠ ಬಾಕಿ ಬಿಲ್ಲಿನ ಮೊತ್ತದ ಶೇ. 50ರಷ್ಟು ಬಿಡುಗಡೆ ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ವಿನಂತಿಸಿಕೊಂಡರು.

ಈ ಸಂದರ್ಭದಲ್ಲಿ ಎಸ್.ಕೆ. ಪಾಟೀಲ, ಕೆ.ಎಸ್. ಹಾದಿಮನಿ, ಎನ್.ಸಿ. ಮಾಗಡಿ, ಎಂ.ಬಿ. ಅಂಗಡಿ, ರಮೇಶ ರಂಗಣ್ಣವರ, ಸಿ.ಜಿ. ಬಿರಾದಾರ, ಶಿವಾನಂದ ಕರೆಯಣ್ಣವರ, ಎಸ್.ಕೆ. ಮುತ್ತಿನಪೆಂಡಿಮಠ, ಬಸವರಾಜ ಶಿರಗುಂಪಿ, ವಾಯ್.ಎಫ್. ಬಳ್ಳಾರಿ ಮುಂತಾದವರಿದ್ದರು.

## ಸಾಕ್ಷಿ ಸುಭಾಷಿತ

ಇತರರ ದೋಷಗಳನ್ನು ತೋರುವಲ್ಲಿ ಎಲ್ಲರೂ ಸದಾ ನಿಪುಣರಾಗಿಯೇ ಇರುತ್ತಾರೆ.

–ಸುಭಾಷಿತ

## ಸಂಪಾದಕೀಯ

# ಕೇವಲ ನೌಕರಿ ಪಡೆಯುವುದಕ್ಕಷ್ಟೆ ಅಲ್ಲ, ಕೆಲಸ ಮಾಡಲು ಕೊಡಲೇಬೇಕು ಲಂಚ

ಪಿಎಸ್ ಐ ಪರಶುರಾಮ ಸಾಕಷ್ಟು ಕಷ್ಟಪಟ್ಟು 8 ನೌಕರಿ ತ್ಯಜಿಸಿ ಪಿಎಸ್ ಐ ಹುದ್ದೆ ಗಿಟ್ಟಿಸಿಕೊಂಡ ಪ್ರತಿಭಾವಂತರು. ಪ್ರತಿಭೆ ಇದ್ದ ಕಾರಣಕ್ಕೆ ಪಿಎಸ್ ಐ ಹುದ್ದೆಗೆ ಯಾವುದೇ ಲಂಚ ಕೊಡದೆ ಆಯ್ಕೆಯಾದರು. ಆದರೆ ಇನ್ನುಳಿದ ನೌಕರರ ಕಥೆ ಇದೇ ರೀತಿಯಿಲ್ಲ. ಲಂಚ ಕೊಟ್ಟೆ ನೌಕರಿ ಗಿಟ್ಟಿಸಿಕೊಂಡವರ ಸಂಖ್ಯೆ ಸಾವಿರದಲ್ಲಿ ಅಲ್ಲ, ಲಕ್ಷದಲ್ಲಿ ಸಿಗುತ್ತಾರೆ.

ಒಂದು ಕಾಲದಲ್ಲಿ ಸರಕಾರಿ ನೌಕರಿ ಎಂದರೆ ಯಾರೊಬ್ಬರು ಮುಂದೆ ಬರುತ್ತಿರಲಿಲ್ಲ. ಕರೆದು ಕೆಲಸ ಕೊಡುವಂಥ ಕಾಲವೊಂದಿತ್ತು. ಆದಾದ ನಂತರ ಲಂಚ ಕೊಟ್ಟೇ ಸರಕಾರಿ ನೌಕರಿ ಪಡೆಯಬೇಕಾದ ಕಾಲ ಎದುರಾಯಿತು. ಮುಂದೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಾಸ್ ಆಗಿ ನೌಕರಿ ಪಡೆಯುವಂಥ ಕಾಲ ಬಂತು. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿದರೂ ಲಂಚ ಕೊಟ್ಟೆ ನೌಕರಿ ಪಡೆಯಬೇಕಾದ ವಾತಾವರಣ ಆಗಲೂ ಬದಲಾಗಿಲ್ಲ. ಈಗಲೂ ಆಗಿಲ್ಲ.

ಹೀಗೆ ಲಂಚ ಕೊಟ್ಟೊ ಅಥವಾ ಪ್ರತಿಭೆಯಿಂದಲೇ ನೌಕರಿ ಗಿಟ್ಟಿಸಿಕೊಂಡರೂ ಸರಕಾರಿ ಕೆಲಸ ಮಾಡಲೂ ಲಂಚ ಕೊಡಬೇಕಾದ ಪರಿಸ್ಥಿತಿ ಬಂದಿದೆ. ಲಂಚ ಕೊಡದಿದ್ದರೆ ಸ್ಥಳ ನಿಯುಕ್ತಿ ಆಗುವುದಿಲ್ಲ. ನಿಯುಕ್ತಿಗೆ ಪ್ರಯತ್ನಿಸಿದರೆ ಜನಪ್ರತಿನಿಧಿಗಳ ಒತ್ತಡದಿಂದ ಪಿಎಸ್ ಐ ಪರಶುರಾಮ ಅವರಂತೆ ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬರುತ್ತದೆ.


ಇದು ಕೇವಲ ಪೊಲೀಸ್ ಇಲಾಖೆಯೊಂದರ ಕಥೆಯಲ್ಲ, ಎಲ್ಲ ಇಲಾಖೆಯಲ್ಲೂ ಲಂಚ ಕೊಟ್ಟೆ ಸ್ಥಳ ನಿಯುಕ್ತಿ ಮಾಡಿಕೊಳ್ಳಬೇಕಾದ ಕೆಟ್ಟ ಸಂಪ್ರದಾಯಕ್ಕೆ ಕರ್ನಾಟಕವೂ ಹೊರತಾಗಿಲ್ಲ. ಇದಕ್ಕೆ ಇನ್ನೊಂದು ಉದಾಹರಣೆ ಕೊಡುವುದಾದರೆ ನಗರಾಭಿವೃದ್ಧಿ ಇಲಾಖೆಯೊಂದರಲ್ಲೇ 25ಕ್ಕೂ ಹೆಚ್ಚು ಉನ್ನತ ಹುದ್ದೆಯಲ್ಲಿರುವ ಅಧಿಕಾರಿಗಳು ಸ್ಥಳ ನಿಯುಕ್ತಿಯಿಲ್ಲದೇ ಮನೆಯಲ್ಲೇ ಕುಳಿತು ಸರಕಾರಿ ಸಂಬಳ ಪಡೆಯುತ್ತಿದ್ದಾರೆ.

ರಾಜ್ಯದಲ್ಲಿ 2.68 ಲಕ್ಷ ಸರಕಾರಿ ಹುದ್ದೆ ಖಾಲಿ ಇರುವುದರಿಂದ ಆಡಳಿತ ಯಂತ್ರ ಸುಗಮವಾಗಿ ನಡೆಯುತ್ತಿಲ್ಲ ಎನ್ನುವ ದೂರು ಒಂದೆಡೆಯಾದರೆ, ಇರುವ ಅಧಿಕಾರಿಗಳಿಗೆ ಸ್ಥಳ ನಿಯುಕ್ತಿ ಕೊಡದೆ ಖಾಲಿ ಕೂಡಿಸಿ ಸಂಬಳ ಕೊಡುವಂಥ ಸಂಸ್ಕೃತಿಯೂ ಕರ್ನಾಟಕದಲ್ಲಿ ಮಾತ್ರ ಕಾಣಸಿಗಲು ಸಾಧ್ಯ. ಈ ಎಲ್ಲ 25 ಜನ ಹಿರಿಯ ಅಧಿಕಾರಿಗಳಿಗೆ ಸ್ಥಳ ನಿಯುಕ್ತಿ ತೋರಿಸಿದರೂ ಅಲ್ಲಿ ಕೆಲಸ ಮಾಡಲು ಹಣ ಕೊಡಬೇಕಾದ ಪರಿಸ್ಥಿತಿ ಇದೆ. ಹೀಗಾಗಿ ಹಣ ಕೊಡಲು ನಿರಾಕರಿಸಿದ ಅಧಿಕಾರಿಗಳಿಗೆ ಯಾವುದೇ ಸ್ಥಳ ನಿಯುಕ್ತಿ ಇಲ್ಲದೆ ಪುಕ್ಕಟೆ ಸಂಬಳ ಕೊಡುವಂತಾಗಿದೆ.

ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಜನರೂ ಭ್ರಷ್ಟಾಚಾರದಲ್ಲಿ ನಿರತರಾಗಿ, ಭ್ರಷ್ಟಾಚಾರ ನಮ್ಮ ಬದುಕಿನ ಭಾಗವೇ ಆಗಿರುವಾಗ ಇಂಥ ವ್ಯವಸ್ಥೆ ಸುಧಾರಿಸಲು ಬದಲಾವಣೆಯಾಗಲು ಸಾಧ್ಯವೇ ಇಲ್ಲ. ಭ್ರಷ್ಟಾಚಾರ ನಿಯಂತ್ರಣ ವಿಷಯದಲ್ಲಿ ಸಕಾರಾತ್ಮಕ ನಿರೀಕ್ಷೆಗಳನ್ನು ಇಟ್ಟುಕೊಳ್ಳುವುದು ಸಹ ಅಪರಾಧ ಎನ್ನುವಂತಾಗಿದೆ.

### ನಾಡಿನ ದೊಡ್ಡ ಹಬ್ಬವಾದ ನಾಗರ ಪಂಚಮಿ ನಿಮಿತ್ತ ಲೇಖನ

# ನಾಗರಾಜನ ಪೂಜಿಸೋಣ ಬನ್ನಿ



ನಮ್ಮ ಭವ್ಯ ಭಾರತ ದೇಶದಲ್ಲಿ ಹಲವು ಹಬ್ಬಗಳ ಆಚರಣೆಯಲ್ಲಿವೆ. ಅದರಲ್ಲೂ ಕನ್ನಡ ನಾಡು ಹಬ್ಬಗಳ ತವರೂರು. ಇಲ್ಲಿನ ಹಳ್ಳಿಗಳಲ್ಲಿ ಹಬ್ಬಗಳಿಗೆ ವಿಶೇಷ ಮಹತ್ವನ್ನು ನೀಡುತ್ತಾರೆ. ಅಂತಹ ಹಬ್ಬಗಳಲ್ಲಿ ದೊಡ್ಡ ಹಬ್ಬವೆಂದೇ ಹೆಸರಾಗಿರುವ ಹಬ್ಬ 'ನಾಗರ ಪಂಚಮಿ'. ಈ ಹಬ್ಬವನ್ನು ನಾಡಿನಾದ್ಯಂತ ವಿಜ್ರಂಭಣೆಯಿಂದ ಆಚರಿಸುತ್ತಾರೆ. ನಾಗರ ಪಂಚಮಿಯು ತನ್ನ ಬೆನ್ನಿಗೆ ಹಬ್ಬಗಳ ಸಾಲುಗಳನ್ನೇ ಕಟ್ಟಿಕೊಂಡು ಬರುವದರಿಂದ ಈ ಹಬ್ಬಕ್ಕೆ ವಿಶೇಷ ಮಹತ್ವವಿದೆ.

ಶ್ರಾವಣ ಮಾಸದ ಶುಕ್ಲ ಪಕ್ಷದ ಪಂಚಮಿ ತಿಥಿಯಂದು ನಾಗರ ಪಂಚಮಿ ಹಬ್ಬ ಆಚರಿಸುತ್ತಾರೆ. ಹಿನ್ನೆಲೆ ಪ್ರಕಾರ ಮದುವೆಯಾಗಿ ಗಂಡನ ಮನೆಗೆ ಹೋದ ಹೆಣ್ಣು ಮಕ್ಕಳನ್ನು ತವರು ಮನೆಯ ಸಹೋದರರು ಹಬ್ಬಕ್ಕೆ ನಾಲ್ಕಾರು ದಿನ ಮುಂಚಿತವಾಗಿ ಸಹೋದರಿಯರನ್ನು ತವರು ಮನೆಗೆ ಕರೆದುಕೊಂಡು ಬರುವುದು ಒಂದು ವಿಶೇಷವಾಗಿದೆ. ನಾಗರ ಪಂಚಮಿ ಎಂದರೆ ಸಹೋದರಿಯರು ತವರು ಮನೆಗೆ ಬರಬೇಕು. ಹಬ್ಬಕ್ಕೆ ಮುನ್ನ ಬಂದ ಹೆಣ್ಣು ಮಕ್ಕಳು ಮನೆಯವರೊಂದಿಗೆ ಸೇರಿ ಸಂತೋಷದಿಂದ ಹಬ್ಬ ಆಚರಿಸುವದು ವಿಶೇಷವಾಗಿದೆ.

ಗಂಡನ ಮನೆಯಿಂದ ತವರು ಮನೆಗೆ ಬಂದ ಹೆಣ್ಣು ಮಕ್ಕಳಿಗೆ ತವರು ಮನೆಯ ಬಳೆ ಎಂದರೆ ತುಂಬಾ ಇಷ್ಟ ಅದರಂತೆ ಹೆಣ್ಣು ಮಕ್ಕಳು ಕೈ ತುಂಬಾ ಚಿಕ್ಕೆ ಬಳೆ ಇಟ್ಟುಕೊಳ್ಳುವದರೊಂದಿಗೆ ಈ ಹಬ್ಬ ಪ್ರಾರಂಭವಾಗುತ್ತದೆ. ನಾಗರ ಪಂಚಮಿ ಸಂಭ್ರಮ ಮೂರು ದಿನಗಳ ಹಬ್ಬವಾಗಿದೆ. ಮೊದಲನೆ ದಿನ ರೊಟ್ಟಿ ಪಂಚಮಿ, ಮರುದಿನ ನಾಗ ಚೌತಿ, ಅದರ ಮರುದಿನ ನಾಗರ ಪಂಚಮಿ.

ರೊಟ್ಟಿ ಪಂಚಮಿ ದಿನ ಮನೆಯಲ್ಲಿ ಎಳ್ಳು ಹಚ್ಚಿದ ರೊಟ್ಟಿ ತಯಾರಿಸಿ ಅದರ ಜೊತೆಯಲ್ಲಿ ಕಡಲೆಕಾಳಿನ ಉಸುಳಿ, ಚಪಾತಿ, ಬದನೆಕಾಯಿ ಪಲ್ಯ (ಎಣಗಾಯಿ ಪಲ್ಯ), ಶೇಂಗಾ ಚಟ್ನಿ, ಎಳ್ಳು ಚಟ್ನಿ ಹೀಗೆ ವಿವಿಧ ಆಹಾರ ಪದಾರ್ಥಗಳನ್ನು ತಯಾರಿಸಿಕೊಂಡು ಓಣಿಗಳಲ್ಲಿ ಆತ್ಮೀಯರಿಗೆ, ಬಂಧುಗಳಿಗೆ ವಿತರಿಸಿ ಸಂಭ್ರಮ ಪಡುತ್ತಾರೆ.

ನಾಗಚೌತಿ ದಿನ ಕಲ್ಲಿನ ನಾಗನಿಗೆ ಅಥವಾ ಮಣ್ಣಿನಿಂದ ಚಿತ್ರ ಬಿಡಿಸಿದ ನಾಗನಿಗೆ ಪೂಜೆ ಮಾಡಿ, ಬೆಲ್ಲದ ನೀರನ್ನು ಕೊಬ್ಬರಿ ಗಿಟಗದಲ್ಲಿ ಹಾಕಿಕೊಂಡು ನನ್ನ ತವರಿಗೆ ಸುಖ, ಶಾಂತಿ, ನೆಮ್ಮದಿ ನೀಡು ಎಂದು ತವರಿನ ಹೆಣ್ಣುಮಕ್ಕಳು ನಾಗಪ್ಪನಲ್ಲಿ ಬೇಡಿಕೊಳ್ಳುತ್ತಾ ಭಕ್ತಿಯಿಂದ ಹಾಲೆರೆಯುತ್ತಾರೆ.

ನಾಗರ ಪಂಚಮಿ ದಿನ ಹುತ್ತದ ಮಣ್ಣು ತಂದು ಆ ಮಣ್ಣಿನಿಂದ ತಯಾರಿಸಿದ ನಾಗಪ್ಪನಿಗೆ ಪೂಜೆ ಮಾಡಿ ಮನೆಯವರೆಲ್ಲರೂ ಸೇರಿ ನಾಗಪ್ಪನಿಗೆ ಹಾಲು ಎರೆಯುತ್ತಾರೆ. ನಂತರ ಎಲ್ಲರೂ ಸೇರಿ ಭೋಜನವನ್ನು ಮಾಡಿ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಾರೆ.

ನಾಗಪ್ಪನಿಗೆ ಹಾಲು ಎರೆದ ನಂತರ ಸಹೋದರ-ಸಹೋದರಿಯರು ಸೇರಿ ಊರ ಮುಂದಿನ ದೊಡ್ಡ ಮರಕ್ಕೆ ಸಾರ್ವಜನಿಕವಾಗಿ ದೊಡ್ಡದಾದ ಜೋಕಾಲಿ ಕಟ್ಟಿ ಎಲ್ಲರೂ ಸೇರಿ ಜೋಕಾಲಿ ಆಟ ಆಡುತ್ತಾರೆ. ಈ ಜೋಕಾಲಿಯಲ್ಲಿ ಮೆಟ್ಟಿಲು ಜೋಕಾಲಿ ಹಾಗೂ ತಿರುಗೋ ಜೋಕಾಲಿಗಳನ್ನು ಕಾಣಬಹುದಾಗಿದೆ. ಜೋಕಾಲಿ ಆಡುವುದೇ ಒಂದು ಸಂಭ್ರಮ.

ಹೀಗೆ ನಾಗರ ಪಂಚಮಿಯನ್ನು ಎಲ್ಲರೂ ಸೇರಿ ಅತೀ ಸಂಭ್ರಮದಿಂದ ಆಚರಿಸುತ್ತಾರೆ. ಭಕ್ತಿಯಿಂದ ನಾಗದೇವನ ಪೂಜೆ ಮಾಡುತ್ತಾ ಈ ವರ್ಷ ಮಳೆ ಬೆಳೆ ಚೆನ್ನಾಗಿ ಬರಲಿ, ನಾಡಿನ ಜನಕ್ಕೆ ಸುಖ, ಶಾಂತಿ ಹಾಗೂ ನೆಮ್ಮದಿ ಕರುಣಿಸೆಂದು ಬೇಡಿಕೊಳ್ಳೋಣ. ನಾಗರ ಪಂಚಮಿಯನ್ನು ಅತ್ಯಂತ ವೈಭವದಿಂದ, ಭಕ್ತಿಯಿಂದ ಆಚರಿಸೋಣ.



– ಎಸ್.ಕೆ. ಆಡಿನ. ಶಿಕ್ಷಕರು, ಹೊಳೆಆಲೂರ.

# ಸರಕಾರಿ ಬಾಲಕಿಯರ ಪ್ರೌಢಶಾಲೆಗೆ ವೀರಾಗ್ರಣಿ ಪ್ರಶಸ್ತಿ



■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಇಲ್ಲಿಯ ಬಾಲಕಿಯರ ಸರಕಾರಿ ಪ್ರೌಢಶಾಲೆಯ ಕ್ರೀಡಾಪಟುಗಳು ವಲಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ವೀರಾಗ್ರಣಿ ಪ್ರಶಸ್ತಿಯೊಂದಿಗೆ ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಇಲ್ಲಿಯ ಸಮೀಪದ ಹರ್ಲಾಪೂರ ಗ್ರಾಮದ ಸರಕಾರಿ ಪ್ರೌಢಶಾಲೆಯ ಆಶ್ರಯದಲ್ಲಿ ಜರುಗಿದ ಲಕ್ಕುಂಡಿ ವಲಯ ಮಟ್ಟದ ಕ್ರೀಡಾಕೂಟದ ಖೋ ಖೋ, ಕಬಡ್ಡಿ, ಥ್ರೋಬಾಲ್, ವಾಲಿಬಾಲ್‌ನಲ್ಲಿ ಪ್ರಥಮ ಸ್ಥಾನ ಪಡೆದು ವೀರಾಗ್ರಣಿ ಪ್ರಶಸ್ತಿ ಪಡೆದಿದ್ದಾರೆ. ವೈಯಕ್ತಿಕ ವಿಭಾಗದಲ್ಲಿ ಸಹನಾ ಬೇಗಂ ಗುಡಗೇರಿ 200 ಮೀ ಪ್ರಥಮ, 100 ಮೀ ಓಟ ದ್ವಿತೀಯ, ಅಡೆತಡೆ ಓಟ ಪ್ರಥಮ, ಹುಲಿಗೆವ್ವ ಗಾಜಿ 1500 ಮೀ ಓಟ ಪ್ರಥಮ, 800 ಮೀ ದ್ವಿತೀಯ, 3000 ಮೀ ಓಟ ದ್ವಿತೀಯ , ರಂಜಿತಾ ಅಬ್ಬಿಗೇರಿ ಉದ್ದ ಜಿಗಿತ ಪ್ರಥಮ, ಸುಹಾನ ಬೇಗಂ ಗುಡಗೇರಿ ತ್ರಿವಿಧ ಜಿಗಿತ ಪ್ರಥಮ, ರೋಹಿಣಿ ಹಿರೇಹಾಳ 400 ಮೀ ಓಟದಲ್ಲಿ ದ್ವಿತೀಯ, ಲಕ್ಷ್ಮವ್ವ ಚೌರಗಸ್ತಿ ನಡಿಗೆಯಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

400*100 ರೀಲೆ ಓಟದಲ್ಲಿ ಪ್ರಥಮ, 400*400 ರಿಲೆ ಓಟದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಮಾರ್ಗದರ್ಶನ ನೀಡಿದ ದೈಹಿಕ ಶಿಕ್ಷಕಿ ಜೈಶೀಲಾ ಜ್ಯೋತಿ ಅವರನ್ನು ವಿದ್ಯಾರ್ಥಿಗಳು ಹಾಗೂ ಶಾಲಾ ಅಭಿವೃದ್ಧಿ ಸಮಿತಿಯ ವತಿಯಿಂದ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯ ವೈ.ಎಚ್. ತೆಕ್ಕಲಕೋಟಿ, ಎಸ್.ಡಿ.ಎಂ.ಸಿ ಅಧ್ಯಕ್ಷ ಮಹಾಂತೇಶ ಕುಂಬಾರ, ಸಹ ಶಿಕ್ಷಕರು ಉಪಸ್ಥಿತರಿದ್ದರು.

# ಅಂಗಾಂಗ ದಾನದ ಮಾಹಿತಿ ಕಾರ್ಯಕ್ರಮ




■ ವಿಜಯಸಾಕ್ಷಿ ಸುದ್ದಿ, ಗದಗ

ಅಂಗಾಂಗ ದಾನದ ಮಹತ್ವದ ಬಗ್ಗೆ ಮತ್ತು ಹೇಗೆ ದಾನ ಮಾಡಬಹುದು ಎಂಬುದರ ಬಗ್ಗೆ ವಿದ್ಯಾರ್ಥಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಮಾಹಿತಿ ನೀಡುವ ಕಾರ್ಯಕ್ರಮವನ್ನು ಇಲ್ಲಿನ ಜೆ.ಟಿ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಹುಲಕೋಟಿಯ ಕೆ.ಎಚ್. ಪಾಟೀಲ ಆಸ್ಪತ್ರೆ ಹಾಗೂ ಸಂಶೋಧನಾ ಸಂಸ್ಥೆ ಮತ್ತು ಗದಗ ನಗರದ ಸಂಕಲ್ಪ ಆಸ್ಪತ್ರೆಯ ಮೂತ್ರಪಿಂಡ ಕಸಿ ತಜ್ಞವೈದ್ಯರಾದ ಡಾ. ಅವಿನಾಶ ಆರ್.ಓದುಗೌಡ್ರ ಮಾತನಾಡಿ, ಕರ್ನಾಟಕ ರಾಜ್ಯದಲ್ಲಿ ಇದುವರೆಗೆ 8 ಸಾವಿರಕ್ಕೂ ಹೆಚ್ಚು ಜನರು ಅಂಗಾಂಗ ಕಸಿಗಾಗಿ ತಮ್ಮ ಹೆಸರು ನೋಂದಣಿ ಮಾಡಿಕೊಂಡಿದ್ದು, ಅವಶ್ಯಕತೆ ಇರುವವರ ಸಂಖ್ಯೆಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.

ಆದ್ದರಿಂದ ಸಮಾಜದಲ್ಲಿ ಇದರ ಬಗ್ಗೆ ಜಾಗೃತಿ ಮೂಡಿಸಬೇಕಾಗಿದೆ. ಅಂಗಾಂಗ ದಾನ ಮಾಡಿ ನಮ್ಮವರಿಗೆ ಗುಣಮಟ್ಟದ ಜೀವನ ಹೇಗೆ ದೊರಕಿಸಬಹುದೆಂದು ವಿಸ್ತರವಾಗಿ ತಿಳಿಸಿಕೊಟ್ಟರು. ಈ ಸಂದರ್ಭದಲ್ಲಿ ತಜ್ಞ ವೈದ್ಯರಾದ ಡಾ. ಪ್ಯಾರ ಅಲಿ ನೂರಾನಿ, ಜೆ.ಟಿ. ಕಾಲೇಜಿನ ಪ್ರಾಚಾರ್ಯ ಪಾಟೀಲ, ಕಾಲೇಜಿನ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಸಿಬ್ಬಂದಿ ವರ್ಗದವರು ಇದ್ದರು.



ಗದಗ ನಗರದ ವಿದ್ಯಾದಾನ ಸಮಿತಿಯ ಎಂ.ಬಿ. ಹುಯಿಲಗೋಳ ಶಿಕ್ಷಣ ಮಹಾವಿದ್ಯಾಲಯದಲ್ಲಿ ರಕ್ಷಾ ಬಂಧನ ಹಬ್ಬದ ಅಂಗವಾಗಿ ಪ್ರಶಿಕ್ಷಣಾರ್ಥಿಗಳಿಗೆ ರಾಖಿ ತಯಾರಿಸುವ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಪ್ರಶಿಕ್ಷಣಾರ್ಥಿಗಳು ತಯಾರಿಸಿದ ಬಣ್ಣ ಬಣ್ಣದ ರಾಖಿಗಳನ್ನು ತಯಾರಿಸಿದರು. ಸಂಸ್ಥೆಯ ಕಾರ್ಯದರ್ಶಿ ಶ್ರೀನಿವಾಸ ಹುಯಿಲಗೋಳ, ಪ್ರಾಚಾರ್ಯರಾದ ಡಾ. ಗಂಗೂಬಾಯಿ ಪವಾರ, ಮುಖ್ಯೋಪಾಧ್ಯಾಯರಾದ ಆರ್. ಆರ್. ಜಾಲಿಹಾಳ, ಎಂ.ಆರ್. ಡೊಳ್ಳಿನ, ಕಾಲೇಜಿನ ಸಮಸ್ತ ಉಪನ್ಯಾಸಕರು, ಸಿಬ್ಬಂದಿ ವರ್ಗದವರು ಹಾಗೂ ಪ್ರಶಿಕ್ಷಣಾರ್ಥಿಗಳು ಪಾಲ್ಗೊಂಡಿದ್ದರು.

### ವಕ್ಫ್ ಮಸೂದೆ ಟೀಕಿಸಿದ ಪ್ರತಿಪಕ್ಷಗಳು

# ಇದು ಸಂವಿಧಾನ-ಧರ್ಮದ ಹಕ್ಕಿನ ಮೇಲಿನ ದಾಳಿ



■ ವಿಜಯಸಾಕ್ಷಿ ಸುದ್ದಿ, ನವದೆಹಲಿ

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಗುರುವಾರ ಲೋಕಸಭೆಯಲ್ಲಿ ವಕ್ಫ್ (ತಿದ್ದುಪಡಿ) ಮಸೂದೆ, 2024 ಅನ್ನು ಮಂಡಿಸಿದ್ದು, 1995ರ ವಕ್ಫ್ ಕಾಯ್ದೆಗೆ ತಿದ್ದುಪಡಿ ತಂದಿದೆ. ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಮಂಡಿಸಿದ ಮಸೂದೆಯು ವಿರೋಧ ಪಕ್ಷದ ಸಂಸದರಿಂದ ಭಾರೀ ಟೀಕೆಗೆ ಗುರಿಯಾಯಿತು.

ಕಾಂಗ್ರೆಸ್ ಸಂಸದ ಕೆಸಿ ವೇಣುಗೋಪಾಲ್ ಅವರು ಈ ಮಸೂದೆಯನ್ನು ಸಂವಿಧಾನದ ಮೇಲಿನ ಮೂಲಭೂತ ದಾಳಿ ಮತ್ತು ಧರ್ಮದ ಹಕ್ಕಿನ ಮೇಲಿನ ನೇರ ದಾಳಿ ಎಂದು ಬಣ್ಣಿಸಿದ್ದಾರೆ.

"ನಾವು ಹಿಂದೂಗಳು. ಆದರೆ, ಅದೇ ಸಮಯದಲ್ಲಿ, ನಾವು ಇತರ ಧರ್ಮಗಳ ನಂಬಿಕೆಯನ್ನು ಗೌರವಿಸುತ್ತೇವೆ. ಈ ಮಸೂದೆಯು ಮಹಾರಾಷ್ಟ್ರ, ಹರಿಯಾಣ ಚುನಾವಣೆಗಳಿಗೆ ವಿಶೇಷವಾಗಿದೆ. ಕಳೆದ ಬಾರಿ ಭಾರತದ ಜನತೆ ನಿಮಗೆ ಪಾಠ ಕಲಿಸಿದ್ದು ನಿಮಗೆ ಅರ್ಥವಾಗುತ್ತಿಲ್ಲ. ಇದು ಒಕ್ಕೂಟ ವ್ಯವಸ್ಥೆಯ ಮೇಲಿನ ದಾಳಿ" ಎಂದು ವೇಣುಗೋಪಾಲ್ ಹೇಳಿದರು.

ಈ ಹಿಂದೆ ವೇಣುಗೋಪಾಲ್ ಮತ್ತು ಕಾಂಗ್ರೆಸ್ ಸಂಸದ ಹೈಬಿ ಈಡನ್ ಅವರು ಸಂಸತ್ತಿನಲ್ಲಿ ಮಸೂದೆ ಮಂಡಿಸದಂತೆ ನೋಟಿಸ್ ನೀಡಿದ್ದರು.

ಈಡನ್ ತನ್ನ ನೋಟಿಸ್‌ನಲ್ಲಿ ಮಸೂದೆಯ ಮಂಡನೆಯನ್ನು "ಅಸಂವಿಧಾನಿಕ" ಎಂದು ವಿರೋಧಿಸುತ್ತೇನೆ. ಇದು ಆಸ್ತಿಯ ಹಕ್ಕಿನೊಂದಿಗೆ (ಆರ್ಟಿಕಲ್ 300 ಎ) ಸಂಘರ್ಷದಲ್ಲಿದೆ ಎಂದು ಉಲ್ಲೇಖಿಸಿದ್ದಾರೆ ಎಂದು ಮೂಲಗಳನ್ನು ಉಲ್ಲೇಖಿಸಿ ರಾಷ್ಟ್ರೀಯ ಮಾಧ್ಯಮಗಳು ವರದಿ ಮಾಡಿವೆ.

ಈ ಮಸೂದೆಯು ಸಾಕಷ್ಟು ಕಾನೂನು ರಕ್ಷಣೆಗಳಿಲ್ಲದೆ ವ್ಯಕ್ತಿಗಳು ಮತ್ತು ಧಾರ್ಮಿಕ ಸಂಸ್ಥೆಗಳ ಆಸ್ತಿ ಹಕ್ಕುಗಳನ್ನು ಸಂಭಾವ್ಯವಾಗಿ ಉಲ್ಲಂಘಿಸಬಹುದು ಎಂದು ಅವರು ವಾದಿಸಿದರು.

ಈ ಮಸೂದೆಯು ಆರ್ಟಿಕಲ್ 25 ರ ಅಡಿಯಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ ಎಂದು ಈಡನ್ ವಾದಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎಐಎಂಐಎಂ ಮುಖ್ಯಸ್ಥ ಮತ್ತು ಲೋಕಸಭಾ ಸಂಸದ ಅಸಾದುದ್ದೀನ್ ಓವೈಸಿ ಅವರು ಮಸೂದೆಯನ್ನು ಮಂಡಿಸಿದ್ದಕ್ಕಾಗಿ ಬಿಜೆಪಿಯನ್ನು ತೀವ್ರವಾಗಿ ಟೀಕಿಸಿದರು. ಬಿಜೆಪಿಯನ್ನು "ಮುಸ್ಲಿಮರ ಶತ್ರು" ಎಂದು ಕರೆದರು.

# ಹಣಕಾಸು ನೀತಿ: ಸತತ 9ನೇ ಬಾರಿಗೆ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡ ಆರ್‌ಬಿಐ

■ ವಿಜಯಸಾಕ್ಷಿ ಸುದ್ದಿ, ನವದೆಹಲಿ




ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು 6.5%ನಲ್ಲಿ ಬದಲಾಯಿಸದೆ ಇರಿಸಲು ನಿರ್ಧರಿಸಿದೆ, ಸಾಲದ ಇಎಂಐಗಳ ಮೇಲೆ ತಕ್ಷಣದ ಪರಿಣಾಮ ಬೀರುವುದಿಲ್ಲ ಎಂದು ಖಚಿತಪಡಿಸುತ್ತದೆ. ವಿತ್ತೀಯ ನೀತಿ ಸಮಿತಿಯು (ಎಂಪಿಸಿ) ಆರ್ಥಿಕ ಬೆಳವಣಿಗೆಯನ್ನು ಬೆಂಬಲಿಸುವ ಸಂದರ್ಭದಲ್ಲಿ ಹಣದುಬ್ಬರದ ಗುರಿಯತ್ತ ಮಾರ್ಗದರ್ಶನ ಮಾಡುವ ಗುರಿಯನ್ನು ಹೊಂದಿದೆ.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಗುರುವಾರ ಹಣಕಾಸು ನೀತಿ ಸಮಿತಿ (ಎಂಪಿಸಿ) ಪಾಲಿಸಿ ರೆಪೊ ದರವನ್ನು 6.5% ಯಥಾಸ್ಥಿತಿಯಲ್ಲಿ ಇರಿಸಲು ನಿರ್ಧರಿಸಿದೆ ಎಂದು ಘೋಷಿಸಿತು. "ಎಂಪಿಸಿ 4:2 ಬಹುಮತದಿಂದ ಪಾಲಿಸಿ ರೆಪೋ ದರವನ್ನು 6.5% ನಲ್ಲಿ ನಿರ್ವಹಿಸಲು ನಿರ್ಧರಿಸಿದೆ. ಪರಿಣಾಮವಾಗಿ, ಸ್ಥಾಯಿ ಠೇವಣಿ ಸೌಲಭ್ಯ (ಎಸ್‌ಡಿಎಫ್) ದರವು 6.25% ನಲ್ಲಿ ಉಳಿಯುತ್ತದೆ ಮತ್ತು ಮಾರ್ಜಿನಲ್ ಸ್ಟ್ಯಾಂಡಿಂಗ್ ಫೆಸಿಲಿಟಿ (ಎಂಎಸ್‌ಎಫ್) ದರ ಮತ್ತು ಬ್ಯಾಂಕ್ ದರವು 6.75% ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಸಮಿತಿ ಬದಲಾವಣೆಗಳು: ಮೂವರು ಕೇಂದ್ರ ಬ್ಯಾಂಕ್ ಅಧಿಕಾರಿಗಳು ಮತ್ತು ಮೂವರು ಬಾಹ್ಯ ಸದಸ್ಯರನ್ನು ಒಳಗೊಂಡಿರುವ ಪ್ರಸ್ತುತ ಎಂಪಿಸಿ ಈ ವರ್ಷ ಗಮನಾರ್ಹ ಬದಲಾವಣೆಗಳಿಗೆ ಸಿದ್ಧವಾಗಿದೆ.

### ಸಂಸತ್ತಿನಲ್ಲಿ ವಿನೇಶ್ ಫೋಗಟ್ ಅನರ್ಹತೆ ಗದ್ದಲ

# ಉಭಯ ಸದನಗಳಿಂದ ಹೊರ ನಡೆದ ಪ್ರತಿಪಕ್ಷಗಳು

■ ವಿಜಯಸಾಕ್ಷಿ ಸುದ್ದಿ, ನವದೆಹಲಿ



ಕುಸ್ತಿಪಟು ವಿನೇಶ್ ಫೋಗಟ್ ಅವರನ್ನು ಒಲಿಂಪಿಕ್ಸ್ ಫೈನಲ್‌ನಿಂದ ಅನರ್ಹಗೊಳಿಸಿರುವುದರ ಹಿಂದೆ ಪಿತೂರಿ ನಡೆದಿದೆ ಎಂದು ಆರೋಪಿಸಿ ಇಂಡಿಯಾ ಒಕ್ಕೂಟದ ಸಂಸದರು ಇಂದು (ಆ.8) ಸಂಸತ್ತಿನ ಆವರಣದಲ್ಲಿ ಪ್ರತಿಭಟನೆ ನಡೆಸಿದರು ಮತ್ತು ವಿನೇಶ್ ಅವರಿಗೆ ನ್ಯಾಯಕ್ಕಾಗಿ ಒತ್ತಾಯಿಸಿದರು.

ಕಲಾಪದ ವೇಳೆ ವಿರೋಧ ಪಕ್ಷಗಳಾದ ಕಾಂಗ್ರೆಸ್, ಟಿಎಂಸಿ, ಎನ್‌ಸಿಪಿ (ಎಸ್‌ಪಿ), ಜೆಎಂಎಂ, ಆರ್‌ಜೆಡಿ ಮತ್ತು ಎಸ್‌ಪಿ ಸದಸ್ಯರು ಲೋಕಸಭೆ ಮತ್ತು ರಾಜ್ಯಸಭೆಯಿಂದ ಹೊರನಡೆದರು.

"ವಿನೇಶ್ ಫೋಗಟ್ ಅವರಿಗೆ ನ್ಯಾಯ ಕೊಡಿಸುವಂತೆ ಆಗ್ರಹಿಸಿ ಎಲ್ಲಾ ಪ್ರತಿಪಕ್ಷಗಳು ಲೋಕಸಭೆ ಮತ್ತು ರಾಜ್ಯಸಭೆಯಿಂದ ಹೊರನಡೆದಿವೆ. ಮೋದಿ ಸಾಂತ್ವನದ ಟ್ವೀಟ್ ಮಾಡಿದ್ದಾರೆ. ಸಾಂತ್ವನದ ಟ್ವೀಟ್ ಕೆಲಸ ಮಾಡುವುದಿಲ್ಲ ಮೋದಿ ಜೀ, ಅವರಿಗೆ ನ್ಯಾಯ ಸಿಗಬೇಕು" ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲ ಮಾಧ್ಯಮಗಳ ಮುಂದೆ ಹೇಳಿದ್ದಾರೆ.

"ಪಿತೂರಿಯ ಭಾಗವಾಗಿ ಮೊದಲು ಆ ಮಗಳನ್ನು ದೆಹಲಿಯ ಬೀದಿಯಲ್ಲಿ ಎಳೆದಾಡಲಾಯಿತು. ಈಗ ಅನರ್ಹಗೊಳಿಸಲಾಗಿದೆ. ಆದರೆ, ಸರ್ಕಾರ ಮೂಕಪ್ರೇಕ್ಷಕವಾಗಿದೆ. ಇದು ಭಾರತದ ಕ್ರೀಡಾ ಇತಿಹಾಸದಲ್ಲಿ ಕರಾಳ ದಿನ. ದೇಶದ ಕ್ರೀಡಾಪಟುಗಳನ್ನು ವಿಫಲಗೊಳಿಸಿದ ಸರ್ಕಾರವನ್ನು 140 ಕೋಟಿ ಭಾರತೀಯರು ಕ್ಷಮಿಸುವುದಿಲ್ಲ" ಎಂದು ಸುರ್ಜೇವಾಲ ಆಕ್ರೋಶ ವ್ಯಕ್ತಪಡಿಸಿದ್ದಾರೆ.

### ವಿವಿಧ ಬೇಡಿಕೆಗಳ ಈಡೇರಿಕೆಗೆ ಸ್ಲಂ ನಿವಾಸಿಗಳಿಂದ ಮನವಿ

# ಸ್ಲಂ ಜನ ವಿರೋಧಿ ನೀತಿಗೆ ವಿರೋಧ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರದ ಅಘೋಷಿತ ಕೊಳಚೆ ಪ್ರದೇಶಗಳ ಘೋಷಣೆ ಮಾಡಲು ಮತ್ತು ಕೊಳಗೇರಿ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲು ಹಾಗೂ ಸ್ಲಂ ನಿವಾಸಿಗಳ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸ್ಲಂ ಜನಾಂದೋಲನ ಕರ್ನಾಟಕ ಮತ್ತು ಗದಗ ಜಿಲ್ಲಾ ಸ್ಲಂ ಸಮಿತಿಯ ನೇತೃತ್ವದಲ್ಲಿ ಕೊಳಗೇರಿ ಅಭಿವೃದ್ಧಿ ಮಂಡಳಿಯ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಮನವಿಯನ್ನು ಸಲ್ಲಿಸಿದರು.

ಸ್ಲಂ ಜನಾಂದೋಲನ ಕರ್ನಾಟಕ ರಾಜ್ಯ ಸಂಚಾಲಕ ಹಾಗೂ ಗದಗ ಜಿಲ್ಲಾ ಸ್ಲಂ ಸಮಿತಿ ಅಧ್ಯಕ್ಷ ಇಮ್ತಿಯಾಜ ಆರ್.ಮಾನ್ವಿ ಮಾತನಾಡಿ, ಗದಗ-ಬೆಟಗೇರಿ ನಗರದ ಅನೇಕ ಅಘೋಷಿತ ಗುಡಿಸಲು ಪ್ರದೇಶಗಳನ್ನು ಘೋಷಣೆಗಾಗಿ ಸ್ಥಳೀಯ ನಿವಾಸಿಗಳ ಎಲ್ಲಾ ದಾಖಲೆಗಳೊಂದಿಗೆ ಹಾಗೂ ನಗರಸಭೆಯಿಂದ ನೀಡಲಾಗಿರುವ ಠರಾವು ಪ್ರತಿ ಮತ್ತು ನಿರಾಕ್ಷೇಪಣಾ ಪತ್ರದೊಂದಿಗೆ ಅರ್ಜಿಗಳನ್ನು ಸಲ್ಲಿಸಿ ಎರಡು ವರ್ಷಗಳಾದರೂ ಈವರೆಗೊ ಸ್ಲಂ ಘೋಷಣೆ ಕುರಿತು ಸ್ಲಂ ಬೋರ್ಡ್‌ನಿಂದ ಅಗತ್ಯ ಕ್ರಮ ಕೈಗೊಳ್ಳದೇ ಸ್ಲಂ ಜನ ವಿರೋಧಿ ನೀತಿಯನ್ನು ಅನುಸರಿಸಲಾಗುತ್ತಿದೆ ಎಂದು ಆರೋಪಿಸಿದರು.



ಬರುವ ಸೋಮವಾರದ ಒಳಗೆ ಸಭೆಯನ್ನು ಆಯೋಜಿಸಬೇಕು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸ್ಲಂ ನಿವಾಸಿಗಳ ಕುಂದು-ಕೊರತೆಗಳ ಸಭೆಯನ್ನು ನಡೆಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ ಅವರು, ಸ್ಲಂ ನಿವಾಸಿಗಳ ಬೇಡಿಕೆಗಳನ್ನು ನಿರ್ಲಕ್ಷ್ಯ ಮಾಡಿದಲ್ಲಿ ನಗರದ ಸಾವಿರಾರು ಸ್ಲಂ ನಿವಾಸಿಗಳೊಂದಿಗೆ ಸ್ಲಂ ಬೋರ್ಡ್ ಕಚೇರಿಗೆ ಮುತ್ತಿಗೆ ಹಾಕಿ ಹೋರಾಟ ನಡೆಸಲಾಗುವುದೆಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಗದಗ ಜಿಲ್ಲಾ ಸ್ಲಂ ಸಮಿತಿ ಕಾರ್ಯದರ್ಶಿ ಅಶೋಕ ಕುಸಬಿ, ಮುಖಂಡರಾದ ಇಬ್ರಾಹಿಂ ಮುಲ್ಲಾ, ಮಂಜುನಾಥ ಶ್ರೀಗಿರಿ, ಮೆಹರುನಿಸಾ ಢಾಲಾಯತ, ಮೈಮುನ ಬೈರಕದಾರ, ಪ್ರೇಮಾ ಮಣವಡ್ಡರ, ಸುಶೀಲಮ್ಮ ಗೊಂದಾರ, ಮೆಹಬೂಬಸಾಬ ಬಳ್ಳಾರಿ, ಸಾಕ್ರುಬಾಯಿ ಗೋಸಾವಿ, ಖಾಜೇಸಾಬ ಇಸ್ಮಾಯಿಲನವರ, ಮಕ್ತುಮಸಾಬ ಮುಲ್ಲಾನವರ, ಮಲೇಶಪ್ಪ ಕಲಾಲ, ಮೆಹರುನಿಸಾ ಡಂಬಳ, ಚಂದ್ರಪ್ಪ ಲಕ್ಕುಂಡಿ, ದುರ್ಗಪ್ಪ ಮಣವಡ್ಡರ, ಶರಣಪ್ಪ ಬಿಂಗದಕಟ್ಟಿ, ಈರಮ್ಮ ಬೇವಿನಮರದ, ನಾಗರಾಜ ಮಣವಡ್ಡರ, ಶಿವಾನಂದ ಶಿಗ್ಲಿ, ರಾಜೇಸಾಬ ಸೈಯದ, ಮಂಜುನಾಥ ಒಂಟಿಯಲಿ ಮುಂತಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

### ನಗರ ಮಟ್ಟದ ಪ್ರೌಢಶಾಲೆಯ ವಿದ್ಯಾರ್ಥಿಗಳಿಗಾಗಿ ದೇಶಭಕ್ತಿ ಗೀತೆ ಸ್ಪರ್ಧೆ

# ದೇಶಭಕ್ತಿ ಬಿತ್ತುವ ಕಾರ್ಯವಾಗಲಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ವಿಶಾಲ ಭಾರತದ ಏಕತೆಯ ಮೂಲವೇ ದೇಶಭಕ್ತಿ. ಅಂತಹ ದೇಶಭಕ್ತಿಯನ್ನು ಬಿತ್ತುವ ಕಾರ್ಯ ಶಾಲೆಗಳಲ್ಲಿಯೇ ಆಗಬೇಕು. ಆ ದಿಶೆಯಲ್ಲಿ ಲಕ್ಷ್ಮೇಶ್ವರ ತಾಲೂಕಾಡಳಿತ, ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ದೇಶ ಭಕ್ತಿಗೀತೆ ಸ್ಪರ್ಧೆಯನ್ನು ಹಮ್ಮಿಕೊಂಡಿದೆ ಎಂದು ಲಕ್ಷ್ಮೇಶ್ವರ ತಹಸೀಲ್ದಾರ್ ವಾಸುದೇವಸ್ವಾಮಿ ಅಭಿಪ್ರಾಯಪಟ್ಟರು.

ಅವರು ಲಕ್ಷ್ಮೇಶ್ವರ ತಾಲೂಕಾಡಳಿತ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಶಿರಹಟ್ಟಿಯ ವತಿಯಿಂದ 78ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಲಕ್ಷ್ಮೇಶ್ವರ ದಕ್ಷಿಣ ಕ್ಲಸ್ಟರ್ (ಎಂ.ಪಿ.ಕೆ.ಜಿ.ಎಸ್ ಲಕ್ಷ್ಮೇಶ್ವರ)ನಲ್ಲಿ ಹಮ್ಮಿಕೊಳ್ಳಲಾಗಿದ್ದ ಲಕ್ಷ್ಮೇಶ್ವರ ನಗರ ಮಟ್ಟದ ಪ್ರೌಢಶಾಲೆಯ ವಿದ್ಯಾರ್ಥಿಗಳಿಗಾಗಿ ದೇಶಭಕ್ತಿ ಗೀತೆ ಸ್ಪರ್ಧೆಯನ್ನು ದೇಶಭಕ್ತಿ ಗೀತೆಯನ್ನು ಹಾಡುವದರ ಮೂಲಕ ಉದ್ಘಾಟಿಸಿ ಮಾತನಾಡಿರು.

ಉದ್ಘಾಟಕರಾಗಿ ಭಾಗವಹಿಸಿದ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣಪ್ಪ ಧರ್ಮರ ಮಾತನಾಡಿ, ಸಂಗೀತದಿಂದ ಮನಸ್ಸುಗಳನ್ನು ಕಟ್ಟಬಹುದು. ಅದರಲ್ಲೂ ದೇಶಭಕ್ತಿಯ ಸಂಗೀತ ಪ್ರಸ್ತುತಪಡಿಸುವುದರ ಮೂಲಕ ದೇಶವನ್ನು ಒಗ್ಗೂಡಿಸಬಹುದು ಎಂದರು.



ಸಭೆಯ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಮುಖ್ಯೋಪಾಧ್ಯಾಯ ಬಿ.ಎಂ. ಕುಂಬಾರ ಮಾತನಾಡಿ, ಶಾಲೆಗಳಲ್ಲಿ ದೇಶಭಕ್ತಿಯನ್ನು ಬಿತ್ತುವ ಕಾರ್ಯ ದೇಶದ ಎಲ್ಲ ಸಮಸ್ಯೆಗಳಿಗೂ ಪರಿಹಾರವಾಗಬಲ್ಲದು ಎಂದು ಅಭಿಪ್ರಾಯಪಟ್ಟರು. ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಈಶ್ವರ ಮೆಡ್ಲೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಎಂ.ಬಿ. ಹೊಸಮನಿ, ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಜಿ.ಡಿ. ಕಲ್ಲಣ್ಣವರ, ನಿರ್ಣಾಯಕರಾಗಿ ಸಂಗೀತ ವಿದ್ವಾಂಸ ಹಾಗೂ ಶಿಕ್ಷಕ ಡಾ. ಅರ್ಜುನ ವಠಾರ, ಸಿಆರ್‌ಪಿಗಳಾದ ಚಂದ್ರಶೇಖರ ವಡಕಣ್ಣವರ, ಜ್ಯೋತಿ ಗಾಯಕವಾಡ, ವಿಕಲಚೇತನ ನೌಕರರ ಸಂಘದ ಜಿಲ್ಲಾಧ್ಯಕ್ಷ ಆರ್.ಎಂ. ಶಿರಹಟ್ಟಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಲಕ್ಷ್ಮೇಶ್ವರ ದಕ್ಷಿಣ ವಲಯದ ಸಿಆರ್‌ಪಿ ಸತೀಶ್ ಬೋಮಲೆ ನಿರೂಪಿಸಿದರು. ಉತ್ತರ ವಲಯದ ಸಿಆರ್‌ಪಿ ಉಮೇಶ ನೇಕಾರ ಸ್ವಾಗತಿಸಿದರು. ಉರ್ದು ಸಿಆರ್‌ಪಿ ಎನ್.ಎ. ಮುಲ್ಲಾ ವಂದಿಸಿದರು.

ಲಕ್ಷ್ಮೇಶ್ವರ ನಗರ ವ್ಯಾಪ್ತಿಯ 16 ಪ್ರೌಢಶಾಲೆಗಳ ಸುಮಾರು ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ದೇಶಭಕ್ತಿ ಹೆಚ್ಚಿಸುವ ಅತ್ಯುತ್ತಮವಾದ ದೇಶಭಕ್ತಿ ಗೀತೆಗಳನ್ನು ಪ್ರಸ್ತುತಪಡಿಸಿದರು. ವಿವಿಧ ಶಾಲೆಗಳ ಮುಖ್ಯೋಪಾಧ್ಯಾಯರು, ಸಹ ಶಿಕ್ಷಕರು ಪಾಲ್ಗೊಂಡಿದ್ದರು. ವಿಜೇತರಿಗೆ ಬಹುಮಾನ ಹಾಗೂ ಭಾಗವಹಿಸಿದ ಎಲ್ಲ ವಿಧ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ತಾಲೂಕಾ ಕ್ರೀಡಾಂಗಣದಲ್ಲಿ ಜರುಗುವ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ವಿತರಿಸಲಾಗುವದು.

ಫಲಿತಾಂಶ: ಪ್ರಥಮ–ಪೂರ್ಣಿಮಾ ಹಾಗೂ ಸಂಗಡಿಗರು, ಸ್ಕೂಲ್ ಚಂದನ.

ದ್ವಿತೀಯ– ಕೃಪಾ ಕುಲಕರ್ಣಿ ಹಾಗೂ ಸಂಗಡಿಗರು, ಅಕ್ಸ್‌ಫರ್ಡ್ ಸ್ಕೂಲ್.

ತೃತೀಯ: (ಎರಡು ಶಾಲೆಗಳು) ಪಂಚಮಿ ಅಂಬಿಗೇರ ಹಾಗೂ ಸಂಗಡಿಗರು, ಯುನಿಕ್ ಸ್ಕೂಲ್, ರೇಣುಕಾ ಧರ್ಮದಾಸ ಹಾಗೂ ಸಂಗಡಿಗರು, ಎಸ್.ಟಿ.ಪಿ.ಎಂ.ಬಿ ಆಂಗ್ಲ ಮಾಧ್ಯಮ ಶಾಲೆ.

# ಪಿಎಸ್‌ಐ ಪರಶುರಾಮ್ ಪ್ರಕರಣ ಸಿಐಡಿಗೆ ಒಪ್ಪಿಸಿ



■ವಿಜಯಸಾಕ್ಷಿ ಸುದ್ದಿ, ರೋಣ

ಯಾದಗಿರಿ ಪಿಎಸ್‌ಐ ಪರಶುರಾಮ್ ಚಲವಾದಿ ಅವರ ಸಾವಿನ ತನಿಖೆಯನ್ನು ಸಿಐಡಿಗೆ ವಹಿಸಲು ದಲಿತ ಯುವ ಮುಖಂಡ ಅಂದಪ್ಪ ಆರ್.ಮಾದರ ಒತ್ತಾಯಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಪಿಎಸ್‌ಐ ಪರಶುರಾಮ್ ಚಲವಾದಿ ಅವರ ಸಾವು ನಿಗೂಢವಾಗಿದ್ದು, ಸ್ಥಳೀಯ ಶಾಸಕ ಹಾಗೂ ಅವರ ಪುತ್ರನ ಮೇಲೆ ಆರೋಪಗಳು ಕೇಳಿ ಬರುತ್ತಿವೆ. ಈ ಬಗ್ಗೆ ಕೂಲಂಕುಷವಾಗಿ ತನಿಖೆ ನಡೆಸಬೇಕು. ದೂರು ದಾಖಲಾದ ಶಾಸಕ ಹಾಗೂ ಅವರ ಪುತ್ರನನ್ನು ಶೀಘ್ರ ಬಂಧಿಸಿ ವಿಚಾರಣೆ ತಡೆಸಿ, ಆರೋಪ ಸಾಬೀತಾದಲ್ಲಿ ಶಿಕ್ಷೆಗೆ ಗುರಿಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

# ಬಿಎಸ್‌ಎನ್‌ಎಲ್‌ನಿಂದ ಯೋಜನೆಯ ಪ್ರಚಾರ



■ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ಕಳಸಾಪುರ ಮತ್ತು ನರಸಾಪುರ ಗ್ರಾಮಗಳಲ್ಲಿ ಗುರುವಾರ ತಾಂಡಾ, ಕೆಎಸ್‌ಆರ್‌ಟಿಸಿ ಕಾಲೋನಿ, ಪುಟ್ಟರಾಜ ಕಾಲೋನಿಗಳಲ್ಲಿ ಬಿಎಸ್‌ಎನ್‌ಎಲ್‌ನ ಉಚಿತ ಮೊಡೆಮ್, ಇಂಟರ್ನೆಟ್, ಸಿಮ್‌ಕಾರ್ಡ್ ಪಡೆಯುವಂತೆ ಮನೆ ಮನೆಗೆ ತೆರಳಿ ಮೌಖಿಕ ಹಾಗೂ ಧ್ವನಿವರ್ಧಕ ವಾಹನದ ಮೂಲಕ ಮಾಹಿತಿ ನೀಡಲಾಯಿತು.

ಈ ಸಂದರ್ಭದಲ್ಲಿ ಬಿಎಸ್‌ಎನ್‌ಎಲ್‌ನ ಎಹ್.ಎಫ್, ಶಿರಹಟ್ಟಿ, ಮೆಹಬೂಬ್ ಅಮರಗೋಳ, ಭಗತ್‌ಸಿಂಗ್, ಕಳಸಾಪುರ ಗ್ರಾಮದ ಫ್ರಾಂಚೈಸಿ ನಾಗರಾಜ ಬೆಳವಡಿ, ನರಸಾಪುರ ಫ್ರಾಂಚೈಸಿ ವೆಂಕಟೇಶ ಕುಲಕರ್ಣಿ ಮುಂತಾದವರಿದ್ದರು.

# ಶಾಲೆಗೆ ಪ್ರೊಜೆಕ್ಟರ್ ಕೊಡುಗೆ

■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಇಲ್ಲಿನ ಬಸಾಪೂರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸಹ ಶಿಕ್ಷಕಿ ರತ್ನಾ ಗಿ.ಬದಿ ಅವರು ಅಂದಾಜು 25 ಸಾವಿರ ರೂ ಮೌಲ್ಯದ ಪ್ರೋಜೆಕ್ಟರ್ ಅನ್ನು ಕೊಡುಗೆ ನೀಡಿದರು. ಶಾಲಾ ಪ್ರಧಾನ ಗುರು ಬಿ.ವಿ. ಹುಡೆದ ಪ್ರೊಜೆಕ್ಟರ್ ಉದ್ಘಾಟಿಸಿ ಮಾತನಾಡಿ, ಶಾಲಾ ಮಕ್ಕಳ ಕಲಿಕೆಗೆ ಪ್ರೊಜೆಕ್ಟರ್ ಸಹಕಾರಿಯಾಗಿದ್ದು, ವಿದ್ಯಾರ್ಥಿಗಳಿಗೆ ತಂತ್ರಜ್ಞಾನವನ್ನು ಪರಿಚಯಿಸಲು, ಸ್ಮಾರ್ಟ್ ಕ್ಲಾಸ್ ಬೋಧನೆಗೆ, ಶಾಲೆಗಳ ಶೈಕ್ಷಣಿಕ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ದ್ಯಾಮಣ್ಣಾ ಗಂಟೆಣ್ಣವರ, ಸದಸ್ಯರಾದ ಶೈಲಾ ದೊಡ್ಡಮನಿ, ಲಕ್ಷ್ಮಪ್ಪ ಜೂಲಣ್ಣವರ, ಶ್ರೀನಿವಾಸ ಯರೇವಡ್ಡರ, ಪಿ.ಎ. ಕುಪ್ಪನಕೇರಿ, ಮೈಲಾರಪ್ಪ ಬಂಗಿ, ಸಹ ಶಿಕ್ಷಕರಾದ ಎಸ್.ಎಸ್. ಹುಲ್ಲಲ್ಲಿ, ಎಸ್.ಎಸ್. ಕುಸಮ್ಮನವರ ಹಾಗೂ ವಿದ್ಯಾರ್ಥಿಗಳಿದ್ದರು.

# ನ್ಯಾನೋ ಯೂರಿಯಾ ಬಳಕೆಯಿಂದ ಇಳುವರಿ ವೃದ್ಧಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಇಲ್ಲಿನ ರಾಮಗಿರಿ ಗ್ರಾಮದ ರೈತ ಮಹಿಳೆ ಮುತ್ತಕ್ಕಾ ಬಸಪ್ಪ ಬೆಟಗೇರಿ ಇವರ ಹೊಲದಲ್ಲಿ ಕೃಷಿ ಇಲಾಖೆಯ ವತಿಯಿಂದ ಮಂಗಳವಾರ ಮೆಕ್ಕೆಜೋಳ ಬೆಳೆಯಲ್ಲಿ ಡ್ರೋನ್ ಮೂಲಕ ನ್ಯಾನೋ ಯೂರಿಯಾ ಪೋಷಕಾಂಶ ಸಿಂಪರಣೆ ಕುರಿತು ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಗಿತ್ತು.

ಅಪರ ಜಂಟಿ ಕೃಷಿ ನಿರ್ದೇಶಕ ಬಾಲರಡ್ಡಿ ಮಾತನಾಡಿ, ಡ್ರೋನ್ ಮೂಲಕ ನ್ಯಾನೋ ಯೂರಿಯಾ ಸಿಂಪಡಣೆ ಮಾಡುವುದರಿಂದ ಉತ್ತಮ ಇಳುವರಿ ಪಡೆಯಲು ಸಾಧ್ಯ. ಇದರಿಂದ ಕಾರ್ಮಿಕರ ವೆಚ್ಚ ಕಡಿಮೆ, ಸಮಯ ಉಳಿತಾಯ, ಕಾರ್ಮಿಕರ ಒತ್ತಡ ನಿವಾರಣೆಯಾಗುವದರೊಂದಿಗೆ ನೇರವಾಗಿ ಎಲೆಗಳ ಮುಖಾಂತರ ಸಿಂಪಡಣೆ ಆಗುವದರಿಂದ ಬೆಳೆ ಬೇಗ ಚೇತರಿಸಿಕೊಳ್ಳುತ್ತವೆ ಎಂದರು.

ಜಿಲ್ಲಾ ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ ಮಾತನಾಡಿ, ನ್ಯಾನೋ ಯೂರಿಯಾ ಹರಳು ರೂಪದ ಯೂರಿಯಾಗಿಂತಲೂ ಅರ್ಧದಷ್ಟು ಬೆಳೆಗೆ ಸಿಗುತ್ತದೆ. 500 ಎಂಎಲ್ ಇರುವ ನ್ಯಾನೋ ಯೂರಿಯಾದ ಬಾಟಲ್ 50 ಕೆ.ಜಿ. ಚೀಲಕ್ಕೆ ಸಮವಾಗಿದೆ. ರೈತರು ಮೆಕ್ಕೆಜೋಳ ಸೇರಿ ವಿವಿಧ ಬೆಳೆಗಳಿಗೆ ಕೃಷಿ ಕಾರ್ಮಿಕರಿಗೆ ಕೂಲಿ ನೀಡಿ ಬೆಳೆಗಳಿಗೆ ಗೊಬ್ಬರ ಹಾಕುತ್ತಿದ್ದರು. ಈ ರೀತಿ ಗೊಬ್ಬರ ಹಾಕಿದರೆ ಅದು ಬೆಳೆಗಳಿಗೆ ಶೇ.30ರಷ್ಟು ಮಾತ್ರ ತಲುಪುತ್ತಿದೆ ಎನ್ನುವ ತಿಳುವಳಿಕೆ ನೀಡುವ ಕಾರ್ಯವಾಗಿರಲಿಲ್ಲ. ಅದೇ ನ್ಯಾನೋ ಯೂರಿಯಾ ಗೊಬ್ಬರವನ್ನು ಡ್ರೋನ್ ಮೂಲಕ ಸಿಂಪಡಣೆ ಮಾಡಿದರೆ ಇಲ್ಲಿ ಸಣ್ಣ ಸಣ್ಣ ಮಂಜಿನ ರೀತಿ ಬೆಳೆಗಳಿಗೆ ಗೊಬ್ಬರ ತಲುಪುತ್ತದೆ. ಇದರಿಂದ ಸಿಂಪಡಣೆ ಮಾಡಿದ ಶೇ.85ರಷ್ಟು ಗೊಬ್ಬರ ಬೆಳೆಗಳಿಗೆ ತಲುಪುತ್ತದೆ ಎಂದು ತಿಳಿಸಿದರು.

ಜಿಲ್ಲಾ ಕೃಷಿ ಉಪ ನಿರ್ದೇಶಕಿ ಸ್ಫೂರ್ತಿ, ಸಹಾಯಕ ಕೃಷಿ ನಿರ್ದೇಶಕ ರೇವಣಪ್ಪ ಮನಗೂಳಿ, ಕೃಷಿ ಅಧಿಕಾರಿ ಚಂದ್ರಶೇಖರಗೌಡ ನರಸಮ್ಮನವರ, ಬಸಣ್ಣ ಬೆಟಗೇರಿ, ಅಶೋಕ ಬಟಗುರ್ಕಿ, ಶರಣಪ್ಪ ಗುಳಗಣ್ಣನವರ, ದೀಪು ಬಟಗುರ್ಕಿ, ಶಿವಾನಂದ ಮೆಕ್ಕಿ, ಲಿಂಗಶೆಟ್ಟಿ, ರಾಮಗೇರಿ ಗ್ರಾಮದ ರೈತರು ಶಿರಹಟ್ಟಿ, ಲಕ್ಷ್ಮೇಶ್ವರ ಕೃಷಿ ಇಲಾಖೆ ಸಿಬ್ಬಂದಿಗಳು ಹಾಜರಿದ್ದರು.

# ಗದಗ ಜಿಲ್ಲಾ ಘಟಕದ ಪದಾಧಿಕಾರಿಗಳ ಆಯ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ಅಖಿಲ ಕರ್ನಾಟಕ ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘಗಳ ಒಕ್ಕೂಟ, ಡಾ. ಶಿವರಾಜ್‌ಕುಮಾರ್ ಅಭಿಮಾನಿಗಳ ಸಂಘ ಹಾಗೂ ರಾಜರತ್ನ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳ ಸಂಘಗಳ ಒಕ್ಕೂಟಗಳ ಜಿಲ್ಲಾ ಘಟಕದ ಪದಾಧಿಕಾರಿಗಳನ್ನು ಕೊಪ್ಪಳ ಮತ್ತು ಗದಗ ಉಸ್ತುವಾರಿ ಖಾದರಭಾಷಾ ಮತ್ತು ಗದಗ ಜಿಲ್ಲಾಧ್ಯಕ್ಷ ವಿಠ್ಠಲ ಪರಾಪೂರರ ಆದೇಶದ ಮೇರೆಗೆ ಆಯ್ಕೆ ಮಾಡಲಾಯಿತು.



ಇದೇ ಸಂದರ್ಭದಲ್ಲಿ ಒಕ್ಕೂಟದ ಗದಗ ಜಿಲ್ಲಾ ಘಟಕದ ವತಿಯಿಂದ ಗದಗ–ಬೆಟಗೇರಿ ನಗರಸಭೆಯ ನಾಮನಿರ್ದೇಶಿತ ಸದಸ್ಯರಾಗಿ ನೇಮಕಗೊಂಡ ಬಾಬು ನರಸಾಪುರರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ವಿಠ್ಠಲ ಪರಾಪೂರ, ಉಪಾಧ್ಯಕ್ಷರಾದ ನಾಗರಾಜ ಗುತ್ತಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಸಂಗಾಪೂರ, ಗದಗ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ರೇಖಾ ಬಂಗಾರಶೆಟ್ಟರ್, ಮಹಿಳಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೇಘನಾ ಎಂ.ಕೊಟ್ಟೂರ, ಸಂಘದ ಮಾರ್ಗದರ್ಶಕರಾದ ಹೊನ್ನಪ್ಪ ಸಾಕಿ, ದುರ್ಗಪ್ಪ ಪೂಜಾರ, ವಿನಾಯಕ ಗಜಕೋಶ, ಮುತ್ತು ದೊಡ್ಡಮನಿ, ರಾಜು ಅಗಸಿನಕೊಪ್ಪ, ಲಕ್ಷ್ಮಣ ವಡ್ಡರಕಲ್ಲ, ಶಂಕರ ಬನಹಟ್ಟಿ, ವಿನಾಯಕ ಬಾರಕೇರ, ಚಿದಾನಂದ ಚಲವಾದಿ, ಯೋಗೇಶ್ವರಿ, ಉಸ್ಮಾನ ಮಾಳೆಕೊಪ್ಪ, ಹನೀಫ ಮುಳಗುಂದ ಮುಂತಾದವರು ಉಪಸ್ಥಿತರಿದ್ದರು.

# ಶೂ–ಸಾಕ್ಸ್ ವಿತರಣೆ



■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಇಲ್ಲಿಯ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಎಸ್‌ಡಿಎಂಸಿ ಅಧ್ಯಕ್ಷ ಮರಿಯಪ್ಪ ವಡ್ಡರ ಉಚಿತ ಶೂ–ಸಾಕ್ಸ್ ವಿತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸರಕಾರ ಶಿಕ್ಷಣ ಕಲಿಕೆಗಾಗಿ ಬೇಕಾಗುವ ಅನೇಕ ವಸ್ತಗಳನ್ನು ಉಚಿತವಾಗಿ ನೀಡುತ್ತಿದ್ದು, ಪಾಲಕರು ಮತ್ತು ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು. ಶಿಕ್ಷಕರು ಮಾಡಿದ ಪಾಠವನ್ನು ಶ್ರದ್ಧೆಯಿಂದ ಕಲಿತು ಮನೆಯಲ್ಲಿ ಮತ್ತೊಮ್ಮೆ ಅದನ್ನು ಅಭ್ಯಾಸ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಉಪಾಧ್ಯಕ್ಷೆ ಅಕ್ಕಮಹಾದೇವಿ ಶಿಗ್ಲಿ, ಪ್ರಧಾನ ಶಿಕ್ಷಕ ಎಸ್.ಜಿ. ಕಂಠಿ, ಎಸ್.ಬಿ. ಪಾಟೀಲ, ಎಸ್.ಕೆ. ಹೊನಹಳ್ಳಿ, ಎಸ್.ಕೆ. ಬಳಿಗಾರ, ಜೆ.ಆರ್. ಕುಲಕರ್ಣಿ, ಎಸ್.ಎಸ್. ಅಂಕದ ಉಪಸ್ಥಿತರಿದ್ದರು.

# ಕ್ರೀಡೆ ಜೀವನದ ಅವಿಭಾಜ್ಯ ಅಂಗವಾಗಲಿ

■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಸದೃಡ ಮನಸ್ಸು, ಸದೃಢ ದೇಹ ರಚನೆಗಾಗಿ ವಿದ್ಯಾರ್ಥಿಗಳು ಕ್ರೀಡೆಯನ್ನು ತಮ್ಮ ಜೀವನದ ಅವಿಭಾಜ್ಯ ಅಂಗವನ್ನಾಗಿ ಅಳವಡಿಸಿಕೊಳ್ಳಬೇಕೆಂದು ಗ್ರಾ.ಪಂ ಉಪಾಧ್ಯಕ್ಷ ಶ್ಯಾಮಸುಂದರ ಡಂಬಳ ಸಲಹೆ ನೀಡಿದರು.

ಇಲ್ಲಿಯ ಅಡವಿಸೋಮಾಪೂರ ಸರಕಾರಿ ಪ್ರೌಢಶಾಲೆ, ಶಾಲಾ ಶಿಕ್ಷಣ ಇಲಾಖೆ ಗದಗ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹಾಗೂ ಸಮನ್ವಯಾಧಿಕಾರಿಗಳು ಗ್ರಾಮೀಣ ವಲಯ ಗದಗ ಇವುಗಳ ಸಂಯುಕ್ತ ಆಶ್ರಯದಲ್ಲಿ ಜರುಗಿದ ಅಡವಿಸೋಮಾಪೂರ ವಲಯ ಮಟ್ಟದ ಪ್ರೌಢಶಾಲೆಗಳ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದರು.



ಜಿಲ್ಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಫ್.ವಿ. ಪೂಜಾರ ಕ್ರೀಡಾ ಜ್ಯೋತಿಯನ್ನು ಸ್ವೀಕರಿಸಿ ಮಾತನಾಡಿದರು. ಎಸ್‌ಡಿಎಂಸಿ ಅಧ್ಯಕ್ಷ ಹನೀಪಸಾಬ ಕುಮನೂರು ಅಧ್ಯಕ್ಷತೆ ವಹಿಸಿದ್ದರು. ದೈಹಿಕ ಶಿಕ್ಷಕ ಪರೀವಿಕ್ಷಣ ಟಿ.ಎಸ್. ಪವಾರ, ಬಿ.ಆರ್.ಸಿ ಭಾವಿಕಟ್ಟಿ, ಗ್ರಾ.ಪಂ ಸದಸ್ಯೆ ಬಸವ್ವ ಪುರದ, ಪ್ರಭಾರಿ ಮುಖ್ಯೋಪಾಧ್ಯಾಯೆ ನೀಲಮ್ಮ ಅಂಗಡಿ, ಈರಣ್ಣ ಸೊರಟೂರು, ನಾಗರಾಜ, ಸೋಮನಕಟ್ಟಿ, ಉಪಸ್ಥಿತರಿದ್ದರು. ದೈಹಿಕ ಶಿಕ್ಷಕ ಕೆ.ಎಚ್. ನವಲಗುಂದ ಸ್ವಾಗತಿಸಿದರು. ರೇಖಾ ಪಾಟೀಲ ನಿರೂಪಿಸಿದರು. ಗಾಯತ್ರಿ ವಸ್ತ್ರದ ವಂದಿಸಿದರು.

# ವಿವಿಧ ಯೋಜನೆಗಳ ಸೌಲಭ್ಯಕ್ಕೆ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2024–25ನೇ ಸಾಲಿನಲ್ಲಿ ಡಿ.ದೇವರಾಜ್ ಅರಸು ಸ್ವಯಂ ಉದ್ಯೋಗ ವೈಯಕ್ತಿಕ ಸಾಲ ಯೋಜನೆ, ಗಂಗಾ ಕಲ್ಯಾಣ ನೀರಾವರಿ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ, ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಸ್ವಯಂ ಉದ್ಯೋಗ ಸಾಲ ಯೋಜನೆ ( ವಾಣಿಜ್ಯ ಬ್ಯಾಂಕುಗಳ ಸಹಯೋಗದೊಂದಿಗೆ ), ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ, ಹೊಲಿಗೆ ಯಂತ್ರ ವಿತರಣೆ ಯೋಜನೆಗಳ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಈ ಮೇಲ್ಕಾಣಿಸಿದ ಎಲ್ಲ ಯೋಜನೆಗಳು ವಿಶ್ವ ಕರ್ಮ, ಉಪ್ಪಾರ, ಅಂಬಿಗ, ಸವಿತಾ, ಮಡಿವಾಳ, ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯ, ಒಕ್ಕಲಿಗ, ಲಿಂಗಾಯತ, ಕಾಡುಗೊಲ್ಲ, ಮರಾಠ ಮತ್ತು ಇದರ ಉಪ ಸಮುದಾಯಗಳು ಹೊರತುಪಡಿಸಿ ಹಿಂದುಳಿದ ವರ್ಗಗಳ ಪ್ರವರ್ಗ–1 , 2 ಎ, 3 ಎ ಮತ್ತು 3 ಬಿ ನಲ್ಲಿ ಉಳಿದ ಸಮುದಾಯಗಳಿಗೆ ಅನ್ವಯವಾಗುತ್ತವೆ.

ಅರ್ಜಿ ಸಲ್ಲಿಸಲು ಆಗಸ್ಟ್ 31 ಕೊನೆಯ ದಿನವಾಗಿದ್ದು, ಅರ್ಜಿಗಳನ್ನು http://sevasindhu.karnataka.gov.in ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ನಿಗಮದ ವೆಬ್ ಸೈಟ್ www.dbcdc.karnataka.gov.in ಇಲ್ಲಿ ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# 'ಕ್ವಿಜೇಬಲ್ಡ್ 2024–25' ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ಕ್ವಿಜೇಬಲ್ಡ್ ಫೌಂಡೇಶನ್ ಇವರು 2024–25ನೇ ಸಾಲಿನಲ್ಲಿ ಝೋನಲ್ ಮಟ್ಟದಲ್ಲಿ ರಾಜ್ಯದಲ್ಲಿರುವ ಸರ್ಕಾರಿ, ಸ್ವಯಂಸೇವಾ ಸಂಸ್ಥೆಗಳ ಮುಖಾಂತರ ರಾಜ್ಯದಲ್ಲಿ ನಡೆಯುತ್ತಿರುವ ವಿಶೇಷ ಶಾಲೆಗಳಿಗೆ 'ಕ್ವಿಜೇಬಲ್ಡ್ 2024–25' ಕ್ವಿಜ್ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಕಾರ್ಯಕ್ರಮಕ್ಕೆ ಬೌದ್ಧಿಕ ವಿಕಲಚೇತನರು ಇಂಟಲೆಕ್ಷುವಲ್ ಡಿಸ್‌ಎಬಿಲಿಟಿ, ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್, ಸೆರೆಬ್ರಲ್ ಪಾಲ್ಸಿ ಹೊಂದಿರುವ ಮಕ್ಕಳನ್ನು ಆನ್‌ಲೈನ್‌ನಲ್ಲಿ ಸೋಲೋ ರೆಜಿಸ್ಟ್ರೇಶನ್ online-www.quizabled.com ಈ ಲಿಂಕ್ ಮುಖಾಂತರ ರೆಜಿಸ್ಟ್ರೇಶನ್ ಮಾಡಿಸಿ ಆನ್‌ಲೈನ್ ಮುಖಾಂತರವೇ ಪಾಲ್ಗೊಳ್ಳಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

### ಬಸವ ಯೋಗ ಮಂದಿರದಲ್ಲಿ ಸಾಪ್ತಾಹಿಕ ವಚನ ಶ್ರಾವಣ ಪ್ರಾರಂಭೋತ್ಸವ

# ವ್ಯವಹಾರದಲ್ಲಿ ಪ್ರಾಮಾಣಿಕತೆ ಇರಬೇಕು



■ವಿಜಯಸಾಕ್ಷಿ ಸುದ್ದಿ, ಗದಗ

ಪ್ರಸ್ತುತ ದಿನಗಳಲ್ಲಿ ಎಲ್ಲವೂ ವ್ಯವಹಾರಿಕವಾಗಿ ನಡೆಯುತ್ತಲಿವೆ. ಏನೇ ಮಾಡಿದರೂ ನಮಗೇನು ಲಾಭ, ಎಷ್ಟು ಗಳಿಕೆಯಾಗುತ್ತದೆ ಎಂಬಿತ್ಯಾದಿ ಲೆಕ್ಕಾಚಾರದ ವಾತಾವರಣ ಸೃಷ್ಠಿಯಾಗಿದೆ. ವ್ಯವಹಾರದಲ್ಲಿ ಲಾಭ ಬೇಕು, ಆದರೆ ಅದು ಅತಿಯಾಗಿರಬಾರದು. ಬಸವಣ್ಣನವರು ವಚನ ವಾಣಿಯಲ್ಲಿ ತಿಳಿಸಿದಂತೆ ವ್ಯವಹಾರವು ಒಂದು ಕಾಸು ಸೋಲದೆ, ಅರ್ಧ ಕಾಸು ಗೆಲ್ಲದೆ ಎಲ್ಲವೂ ಒಪ್ಪುವಂತಿರಬೇಕು ಮತ್ತು ಅದು ಪರಿಶುದ್ಧವಾಗಿರಬೇಕು. ಹೀಗಿರಬೇಕಾದರೆ ನಾವು ಮಾಡುವ ವ್ಯವಹಾರದಲ್ಲಿ ಪ್ರಾಮಾಣಿಕತೆ ಇರಬೇಕೆಂದು ನಿವೃತ್ತ ಶಿಕ್ಷಕ ಜಿ.ಪಿ. ಕಟ್ಟಿಮನಿ ಅಭಿಪ್ರಾಯಪಟ್ಟರು.

ಇಲ್ಲಿನ ಎಸ್‌ವಾಯ್‌ಬಿಎಂಎಸ್ ಯೋಗಪಾಠಶಾಲೆಯ ಬಸವ ಯೋಗ ಕೇಂದ್ರ ಗದಗ ಮತ್ತು ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರ ಇವರುಗಳ ಸಹಯೋಗದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಪ್ರತಿ ಶ್ರಾವಣ ಸೋಮವಾರ ನಗರದ ಬಸವ ಯೋಗ ಮಂದಿರ (ಬಸವಪ್ರಭೆ ಕ್ಯಾಂಪಸ್)ದಲ್ಲಿ ನಡೆಯುವ ಸಾಪ್ತಾಹಿಕ ವಚನ ಶ್ರಾವಣ–2024 ಕಾರ್ಯಕ್ರಮದ ಪ್ರಾರಂಭೋತ್ಸವದಲ್ಲಿ ವಚನ ಚಿಂತಕರಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಕೃಷಿ ವಿಜ್ಞಾನಿ ಡಾ. ಎಸ್.ಕೆ. ನಾಲತ್ವಾಡಮಠ, ಪ್ರಾ. ಕೆ.ಎಚ್. ಬೇಲೂರ ಮಾತನಾಡಿದರು. ವೇದಿಕೆಯಲ್ಲಿ ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರದ ಅಧ್ಯಕ್ಷೆ ವಿಜಯಲಕ್ಷ್ಮೀ ಆನೆಹೊಸೂರು, ಗಿರಿಜಾ ನಾಲತ್ವಾಡಮಠ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಎಸ್.ಎಂ. ಅಂಗಡಿ ಇಂಜಿನಿಯರ್, ವ್ಹಿ.ಎಮ್. ಮುಂದಿನಮನಿ, ಎಂ.ಜಿ. ಕುಂದಗೋಳ, ನೀಲಾವತಿ ರಾಯಾಪುರ, ನೀಲಗಂಗಾ ಅರಹುಣಸಿ, ವಿಜಯಾ ಚೆನ್ನಶೆಟ್ಟಿ ಮುಂತಾದವರಿದ್ದರು.

ಗೌರಿ ಜೀರಂಕಳಿ ಸಾಮೂಹಿಕ ಬಸವ ಪ್ರಾರ್ಥನೆ ಹೇಳಿದರು. ವಿಜಯಲಕ್ಷ್ಮೀ ಮೇಕಳಿ ಸ್ವಾಗತಿಸಿದರು. ಬಸವ ಯೋಗ ಕಾಲೇಜು ಪ್ರಾಚಾರ್ಯ ಕೆ.ಎಸ್. ಪಲ್ಲೇದ ಪ್ರಾಸ್ತಾವಿಕ ನುಡಿ ತಿಳಿಸಿದರು. ಜಯಶ್ರೀ ಡಾವಣಗೇರಿ ವಚನ ಪಠಣ, ಪುಷ್ಪಾ ಕರಕಿಕಟ್ಟಿ ವಚನ ಸಂಗೀತ ಮಾಡಿದರು. ಶಾಂತಾ ಮುಂದಿನಮನಿ ಕಾರ್ಯಕ್ರಮ ನಿರೂಪಿಸಿದರು. ಸುನಂದಾ ಜ್ಯಾನೋಪಂತರ ವಚನ ಮಂಗಲ ಹೇಳಿದರು.

ಮುಖ್ಯ ಅತಿಥಿಗಳಾಗಿ ಪದವಿಪೂರ್ವ ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಬಿ.ಎಸ್. ಗೌಡರ ಮಾತನಾಡಿ, ನಾವಷ್ಟೇ ಹಬ್ಬ ಹರಿದಿನಗಳನ್ನು ಆಚರಿಸಿದರೆ ಸಾಲದು, ನಮ್ಮ ಜೊತೆ ಮಕ್ಕಳು, ನೆರೆಹೊರೆಯವರು ಪಾಲ್ಗೊಳ್ಳುವಂತೆ ಪ್ರೇರೇಪಿಸಬೇಕೆಂದರು.

ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತದಿಂದ

# ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದಿಂದ 2024-25ನೇ ಸಾಲಿನಲ್ಲಿ ಅರಿವು ಶೈಕ್ಷಣಿಕ ಸಾಲ ಯೋಜನೆ (ಹೊಸತು), ಅರಿವು ಶೈಕ್ಷಣಿಕ ಸಾಲ ಯೋಜನೆ (ನವೀಕರಣ), ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಆರ್ಥಿಕ ನೆರವು, ಗಂಗಾ ಕಲ್ಯಾಣ ನೀರಾವರಿ ಯೋಜನೆ, ಸ್ವಯಂ ಉದ್ಯೋಗ ನೇರ ಸಾಲ ಮತ್ತು ಸಹಾಯಧನ ಯೋಜನೆ, ಸ್ವಯಂ ಉದ್ಯೋಗ ಸಾಲ ಯೋಜನೆ (ವಾಣಿಜ್ಯ ಬ್ಯಾಂಕ್‌ಗಳ ಸಹಯೋಗದೊಂದಿಗೆ), ಸ್ವಾವಲಂಬಿ ಸಾರಥಿ ಯೋಜನೆಗಳ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಆಗಸ್ಟ್ 30 ಕೊನೆಯ ದಿನವಾಗಿದ್ದು ಸೇವಾಸಿಂಧು ಪೋರ್ಟಲ್ ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಫಲಾನುಭವಿಯು ಒಂದು ಬಾರಿ ಸಾಲ ಪಡೆದು, ಪಡೆದ ಸಾಲವನ್ನು ನಿಗದಿತ ಅವಧಿಯೊಳಗೆ ಸಂಪೂರ್ಣವಾಗಿ ಮರು ಪಾವತಿಸಿದಲ್ಲಿ ಅಂತಹ ಫಲಾನುಭವಿಗಳಿಗೆ ಒಂದು ಬಾರಿಗೆ ಮಾತ್ರ ದುಪ್ಪಟ್ಟು ಸಾಲವನ್ನು ಗರಿಷ್ಠ ರೂ.2.00 ಲಕ್ಷಗಳವರೆಗೆ ಯಾವುದೇ ಸಹಾಯಧನವಿಲ್ಲದೇ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ನೀಡಲಾಗುವುದು.

ಹೆಚ್ಚಿನ ಮಾಹಿತಿಯನ್ನು ಸಂಬಂಧಪಟ್ಟ ಜಿಲ್ಲೆಗಳಲ್ಲಿರುವ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಗಮ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಕಚೇರಿಯಲ್ಲಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಕಚೇರಿಯಲ್ಲಿ /ನಿಗಮದ ವೆಬ್ ಸೈಟ್ http://ambigaradevelopment.karnataka.govin ನಲ್ಲಿ ಪಡೆಯಬಹುದಾಗಿದೆ.

# ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದಿಂದ 2024-25ನೇ ಸಾಲಿನಲ್ಲಿ ಪಂಚವೃತ್ತಿ ಅಬಿವೃದ್ಧಿಗಾಗಿ ಆರ್ಥಿಕ ನೆರವು, ಸ್ವಯಂ ಉದ್ಯೋಗ ನೇರ ಸಾಲ ಯೋಜನೆ, ಅರಿವು-ಶೈಕ್ಷಣಿಕ ನೇರ ಸಾಲ ಯೋಜನೆ (ಹೊಸದು), ಅರಿವು ಶೈಕ್ಷಣಿಕ ನೇರ ಸಾಲ (ನವೀಕರಣ), ಗಂಗಾ ಕಲ್ಯಾಣ ಯೋಜನೆ, ಸ್ವಯಂ ಉದ್ಯೋಗ ನೇರ ಸಾಲ, ಸ್ವಾವಲಂಬಿ ಸಾರಥಿ ಯೋಜನೆ, ವಿದೇಶ ವ್ಯಾಸಂಗ ಯೋಜನೆ, ಸ್ವಾತಂತ್ರ್ಯ ಅಮೃತ ಮುನ್ನಡೆ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ಸಲ್ಲಿಸಲು ಆಗಸ್ಟ್ 31 ಕೊನೆಯ ದಿನವಾಗಿದ್ದು, ಅರ್ಜಿ ಹಾಗೂ ಹೆಚ್ಚಿನ ಮಾಹಿತಿಗಾಗಿ https://kvcdcl.karnataka.gov.in ನಲ್ಲಿ ಅಥವಾ ನಿಗದಮ ಕೇಂದ್ರ ಕಚೇರಿಯ ದೂರವಾಣಿ ಸಂಖ್ಯೆ 080-22374848/7899899039ದಿಂದ ಪಡೆಯಬಹುದಾಗಿದೆ.



ನರೇಗಲ್ ಪಟ್ಟಣ, ಕೋಡಿಕೊಪ್ಪ, ಕೊಚಲಾಪೂರ, ತೋಟಗಂಟಿ, ಮಲ್ಲಾಪುರ, ದ್ಯಾಂಪೂರ, ಜಕ್ಕಲಿ, ಬೂದಿಹಾಳ, ಮಾರನಬಸರಿ, ಹಾಲಕೆರೆ, ನಿಡಗುಂದಿ, ನಿಡಗುಂದಿಕೊಪ್ಪ, ಯರೇಬೇಲೇರಿ ಸೇರಿದಂತೆ ಸುತ್ತಲಿನ ಗ್ರಾಮಗಳಲ್ಲಿ ಮನೆ ಮಂದಿಯೆಲ್ಲ ಸೇರಿ ಶ್ರದ್ಧಾ-ಭಕ್ತಿಯಿಂದ ನಾಗಪ್ಪನಿಗೆ ಭಕ್ತಿಯಿಂದ ಹಾಲೆರೆದು ನಾಗಪಂಚಮಿ ಆಚರಿಸಿದರು. ಸ್ಥಳೀಯ ನಾಗರಕೆರೆಯ ದಂಡೆಯ ನಾಗದೇವಸ್ಥಾನ, ಪೊಲೀಸ್ ಠಾಣೆ ಆವರಣ, ಭೂತನಾಥ ದೇವಾಲಯ, ಕೆಇಬಿ, ಗ್ರಾಮದೇವತೆ ದೇವಸ್ಥಾನ ಹಾಗೂ ಇತರೆಡೆಗಳಲ್ಲಿ ಇರುವ ನಾಗದೇವರಿಗೆ ಹಾಲೆರೆದರು.

# ಆ.14ರಂದು ಲೋಕಾಯುಕ್ತರಿಂದ ಅಹವಾಲು ಸ್ವೀಕಾರ


■ವಿಜಯಸಾಕ್ಷಿ ಸುದ್ದಿ, ಗದಗ

ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ , ಬೆಂಗಳೂರು ಇವರ ನಿರ್ದೇಶನದಂತೆ ಕರ್ನಾಟಕ ಲೋಕಾಯುಕ್ತ ಗದಗ ಕಚೇರಿಯ ಕೆಳಕಂಡ ಪೊಲೀಸ್ ಅಧಿಕಾರಿಗಳು ಆಗಸ್ಟ್ 14ರಂದು ಲೋಕಾಯುಕ್ತ ಜನ ಸಂಪರ್ಕ ಸಭೆ ಮತ್ತು ಸಾರ್ವಜನಿಕರಿಂದ ಅಹವಾಲು ಸ್ವೀಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಪೊಲೀಸ್ ಉಪಾಧೀಕ್ಷಕರಾದ ವಿಜಯ ಬಿರಾದಾರ ಅವರು ನರಗುಂದ ತಹಸೀಲ್ದಾರ ಕಚೇರಿ ಸಭಾಭವನದಲ್ಲಿ ಬೆ 10.30 ರಿಂದ ಮ 1 ಗಂಟೆಯವರೆಗೆ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ರವಿ ಪುರುಷೋತ್ತಮ ಹಾಗೂ ಶ್ರೀಮತಿ ಶಾವುಬಾಯಿ ಎಸ್ ತೇಲಿ ಅವರು ಲಕ್ಷ್ಮೇಶ್ವರ ತಹಸೀಲ್ದಾರ ಕಚೇರಿ ಸಭಾಭವನದಲ್ಲಿ ಬೆ .10.30 ರಿಂದ ಮ 1 ಗಂಟೆಯವರೆಗೆ ಸಾರ್ವಜನಿಕರಿಂದ ದೂರು / ಅಹವಾಲು ಸ್ವೀಕರಿಸಲಿದ್ದಾರೆ.

# ಸಾಲಕ್ಕೆ ಹೆದರಿ ಆತ್ಮಹತ್ಯೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಪಟ್ಟಣದ ಫಕ್ಕೀರವ್ವ ರಾಮಣ್ಣ ಗೋಡಿ (72) ಎಂಬ ಮಹಿಳೆ ಸಾಲಬಾಧೆಗೆ ಮನನೊಂದು ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣದ ಕುರಿತು ಗುರುವಾರ ಲಕ್ಷ್ಮೇಶ್ವರ ಠಾಣೆಯಲ್ಲಿ ದಾಖಲಾಗಿದೆ.

ಈ ವರ್ಷ ಅತಿಯಾದ ಮಳೆಯಿಂದ ಬೆಳೆ ಬಾರದೇ ಬ್ಯಾಂಕಿನಲ್ಲಿ ಪಡೆದ ಬೆಳೆಸಾಲ ತೀರಿಸುವುದು ಹೇಗೆಂಬ ಚಿಂತೆಯಿಂದ ಮನನೊಂದು ಬುಧವಾರ ರಾತ್ರಿ ಗುಂಜಳ ರಸ್ತೆಯಲ್ಲಿನ ಅವರ ಜಮೀನಿನಲ್ಲಿನ ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಶಿವಾನುಭವ ಕಾರ್ಯಕ್ರಮದಲ್ಲಿ ಡಾ. ತೋಂಟದ ಸಿದ್ಧರಾಮ ಶ್ರೀಗಳು

# ಮನಸ್ಸು ಸಚ್ಛಗೊಳ್ಳಲು ಶರಣರ ನುಡಿಗಳನ್ನು ಕೇಳಿ

■ವಿಜಯಸಾಕ್ಷಿ ಸುದ್ದಿ, 000





ವಿಜಯಸಾಕ್ಷಿ ಸುದ್ದಿ, ಗದಗ

ಶ್ರಾವಣ ಮಾಸ ಎಂದರೆ ಶ್ರವಣಕ್ಕೆ ಮೀಸಲಾಗಿರುವ ಮಾಸ. ಸ್ವಚ್ಛ ಮನಸ್ಸಿನಲ್ಲಿ ಮಾತ್ರ ಶಾಂತಿ, ನೆಮ್ಮದಿ, ಸಮಾಧಾನ ಕಾಣಲು ಸಾಧ್ಯ. ಮನಸನ್ನು ಸ್ವಚ್ಛಗೊಳಿಸಲು ಶರಣರ ಅನುಭಾವದ ನುಡಿಗಳನ್ನು ಕೇಳಬೇಕು ಎಂದು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಹೇಳಿದರು.

ಲಿಂಗಾಯತ ಪ್ರಗತಿಶೀಲ ಸಂಘದ 2705ನೇ ಶಿವಾನುಭವ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, 12ನೇ ಶತಮಾನದ ಪೂರ್ವದಲ್ಲಿ ಹೆಣ್ಣುಮಕ್ಕಳಿಗೆ ಯಾವುದೇ ಧಾರ್ಮಿಕ ಸ್ವಾತಂತ್ರ್ಯ ಇರಲಿಲ್ಲ. ಹೆಣ್ಣುಮಕ್ಕಳಿಗೆ ಮೊಟ್ಟಮೊದಲು ಧಾರ್ಮಿಕ ಸ್ವಾತಂತ್ರವನ್ನು ಕಲ್ಪಿಸಿದವರು ಬಸವಾದಿ ಶಿವಶರಣರು. ಶರಣರ ಸಂಗದಲ್ಲಿದ್ದು ಅನುಭವಮಂಟಪದ ಚಟುವಟಿಕೆಗಳಲ್ಲಿ ಭಾಗಿಯಾಗಿ, ಅನುಭಾವಿಗಳಾಗಿ ಹೆಣ್ಣುಮಕ್ಕಳು ಸಹಿತ ಮಿಂಚಿದ್ದಾರೆ. 50ಕ್ಕಿಂತಲೂ ಹೆಚ್ಚು ಹೆಣ್ಣುಮಕ್ಕಳು ಅತ್ಯಂತ ಮೌಲಿಕವಾಗಿರುವಂತಹ ವಚನಗಳನ್ನು ಬರೆದಿದ್ದಾರೆ. ಲಿಂಗೈಕ್ಯ ಇಲ್ಲಕಲ್ಲ ಮಹಾಂತಪ್ಪಗಳವರು ಬದುಕಿನುದ್ದಕ್ಕೂ ಸಮಾಜದಲ್ಲಿರುವ ದುಶ್ಚಟಗಳನ್ನು, ದುರ್ವ್ಯಶನಗಳನ್ನು, ದುರಾಚಾರಗಳನ್ನು ತಮ್ಮ ಜೋಳಿಗೆಗೆ ಹಾಕಿಸಿಕೊಂಡು ಜನರನ್ನು ಸದಾಚಾರಿಗಳನ್ನಾಗಿ, ಸದ್ಗುಣಿಗಳನ್ನಾಗಿ ಪರಿವರ್ತನೆ ಮಾಡಿದ್ದಾರೆ ಎಂದು ಶ್ರೀಗಳು ಸ್ಮರಿಸಿದರು.

ಗಿರಿಜಕ್ಕ ಧರ್ಮರೆಡ್ಡಿ ಅವರು ಪ್ರವಚನ ನೀಡಿ, ಸತ್ಯ ಮತ್ತು ದೇವರು ಒಂದೇ ನಾಣ್ಯದ ಎರಡು ಮುಖಗಳು. ಶಿವನನ್ನು ಪೌರಾಣಿಕ ಶಿವ, ಯೋಗಿ ಶಿವ, ಪರಶಿವ ಮೂರು ರೀತಿಯಲ್ಲಿ ನೋಡುತ್ತೇವೆ. ಶರಣರು, ಎಲ್ಲಾ ಮಹಾತ್ಮರು ಹೇಳಿರುವುದು ಒಂದೇ ಪರಶಿವ, ನಿರಾಕಾರ ಪರಮಾತ್ಮ. ಪರಶಿವ ಕಣ್ಣಿಗೆ ಕಾಣಿಸುವುದಿಲ್ಲ, ಕೈಗೆ ಸಿಗುವುದಿಲ್ಲ. ಶಿವ ಅಂದರೆ ಮಂಗಲಕರ, ಕಲ್ಯಾಣಕರ, ಸತ್ಯ, ಶಾಶ್ವತ ಎಂದರು.

ಎಂ.ಎ. ರಡ್ಡೇರ ಮಾತನಾಡಿ, ಶಿಕ್ಷಣವನ್ನು ಜೀವಿಸುವ ಹಕ್ಕಿನಲ್ಲಿ ಸೇರಿಸಿದ್ದಾರೆ. ಜೀವಿಸಬೇಕಾದರೆ ಅನ್ನ, ಗಾಳಿ, ನೀರು, ಸೂರು ಎಷ್ಟು ಮುಖ್ಯವೋ ಶಿಕ್ಷಣವೂ ಅಷ್ಟೇ ಮುಖ್ಯ. ಬದುಕುವುದಾದರೆ ಶಿಕ್ಷಣ ಪಡೆದು ಬದುಕಬೇಕು ಎಂದರು.

ಪೂಜ್ಯ ಲಿಂ. ಡಾ. ಮಹಾಂತ ಮಹಾಸ್ವಾಮಿಗಳು ಇಳಕಲ್ಲ ಇವರ 94ನೇ ಜನ್ಮದಿನದ ಅಂಗವಾಗಿ 'ವ್ಯಸನಮುಕ್ತ ದಿನಾಚರಣೆ'ಯನ್ನು ಆಚರಿಸಲಾಯಿತು. ಪೂಜ್ಯ ಶ್ರೀ ಹರ್ಲಾಪೂರ ದೇವರು ಸಮ್ಮುಖ ವಹಿಸಿದ್ದರು. ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ನಿಮಿತ್ತ ಎಂ.ಎ. ರಡ್ಡೇರ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಸುರೇಶ ಕುಂಬಾರ, ಎಸ್.ಕೆ.ವಿ.ಪಿ. ಪದವಿ ಕಾಲೇಜು ಹೊಳೆಆಲೂರದಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಡಾ. ಪ್ರಭು ಗಂಜಿಹಾಳ ಅವರನ್ನು ಸಂಮಾನಿಸಲಾಯಿತು.

ಮೃತ್ಯುಂಜಯ ಹಿರೇಮಠ ಹಾಗೂ ಶ್ರೀ ಗುರುನಾಥ ಸುತಾರ ಸಂಗಡಿಗರು ವಚನಸಂಗೀತ ಹಾಡಿದರು. ಧರ್ಮಗ್ರಂಥ ಪಠಣವನ್ನು ಚಂದ್ರಿಕಾ ಎಂ.ಹೊಂಬಳ, ವಚನ ಚಿಂತನೆಯನ್ನು ಲಕ್ಷ್ಮಿ ವಿ.ಪಟ್ಟಣ ಮಾಡಿದರು. ಶಿವಾನುಭವದ ದಾಸೋಹ ಭಕ್ತಿಸೇವೆಯನ್ನು ವಹಿಸಿಕೊಂಡಿದ್ದ ಮಲ್ಲಿಕಾರ್ಜುನ ಬ.ಸುರಕೋಡ, ವಿದ್ಯಾ ಬ.ಸುರಕೋಡ, ಅಣ್ಣಿಗೇರಿ ಇವರ ಸುಪುತ್ರ ಪ್ರಜ್ವಲ ಹಾಗೂ ಕೀರ್ತಿ ಅವರನ್ನು ಪೂಜ್ಯರು ಸಂಮಾನಿಸಿದರು.

ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರ ಸ್ವಾಗತಿಸಿದರು. ರತ್ನಕ್ಕ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಕ್ಷ ಬಾಲಚಂದ್ರ ಭರಮಗೌಡರ, ರೇಣುಕಾ ವಿ.ಕರೇಗೌಡ್ರ, ಕಾರ್ಯದರ್ಶಿ ಮಹೇಶ ಗಾಣಿಗೇರ, ಸಹಕಾರ್ಯದರ್ಶಿ ವಿಜಯಕುಮಾರ ಹಿರೇಮಠ, ವಿರುಪಾಕ್ಷಪ್ಪ ಅರಳಿ, ಸಂಘಟನಾ ಕಾರ್ಯದರ್ಶಿ ಅಶೋಕ ಹಾದಿ, ಕೋಶಾಧ್ಯಕ್ಷ ಸುರೇಶ ನಿಲೂಗಲ್, ಶಿವಾನುಭವ ಸಮಿತಿ ಚೇರಮನ್‌ರಾದ ವಿವೇಕಾನಂದಗೌಡ ಪಾಟೀಲ ಉಪಸ್ಥಿತರಿದ್ದರು.

'ವ್ಯಸನಗಳು : ವ್ಯಕ್ತಿಯ ಮಾನಸಿಕ-ದೈಹಿಕ ಆರೋಗ್ಯ' ವಿಷಯ ಕುರಿತು ಡಾ. ಅರವಿಂದ ಕರಿನಾಗಣ್ಣನವರ ಉಪನ್ಯಾಸ ನೀಡಿ, ಡಾ. ಮಹಾಂತ ಸ್ವಾಮಿಗಳು 8 ಸಾವಿರ ಹಳ್ಳಿಗಳಿಗೆ ಭೇಟಿ ನೀಡಿ ತಮ್ಮ ಜೋಳಿಗೆಗೆ ದುಶ್ಚಟಗಳನ್ನು ಹಾಕಿಸಿಕೊಂಡು ಜನರನ್ನು ವ್ಯಸನಮುಕ್ತನ್ನಾಗಿಸಿದ್ದಾರೆ. ಮಕ್ಕಳು ಒಳ್ಳೆಯ ಸ್ನೇಹಿತರ ಸಂಗದಲ್ಲಿರಬೇಕು. ಮಕ್ಕಳಲ್ಲಿ ದುಶ್ಚಟಗಳು ಹೆಚ್ಚಾಗಲು ಕೆಟ್ಟ ಸ್ನೇಹಿತರ ಸಂಗ, ಮೊಬೈಲ್, ಚಲನಚಿತ್ರ ನಟರು, ಪರಿಸರ, ಪ್ಯಾಶನ್ ಕಾರಣವೆಂದರು.

# ಬಿ. ಶ್ರೀರಾಮುಲು ಸಮರ್ಥ ನಾಯಕ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಬಿಜೆಪಿ ನಾಯಕ, ಮಾಜಿ ಸಚಿವ ಬಿ. ಶ್ರೀರಾಮುಲು ಅವರ ಜನ್ಮದಿನದ ಅಂಗವಾಗಿ ಗುರುವಾರ ಬಿಜೆಪಿ ಕಾರ್ಯಕರ್ತರು ಮತ್ತು ಅಭಿಮಾನಿಗಳು ಪಟ್ಟಣದ ಬಿ.ಡಿ. ತಟ್ಟಿ ಮೆಮೊರಿಯಲ್ ವಿಕಲಚೇತನ ಶಾಲೆಯ ಮಕ್ಕಳಿಗೆ ಸಿಹಿ ಹಂಚುವ ಮೂಲಕ ಆಚರಿಸಿದರು.

ಈ ವೇಳೆ ಭೀಮಣ್ಣ ಯಂಗಾಡಿ, ಪ್ರಕಾಶ ಬೆಂತೂರು ಮಾತನಾಡಿ, ಬಿ.ಶ್ರೀರಾಮುಲು ಅವರು ಶಾಸಕರಾಗಿ, ಸಂಸದರಾಗಿ, ಸಚಿವರಾಗಿ ಬಿಜೆಪಿ ಪಕ್ಷದ ಶಕ್ತಿಯಾಗಿ ಪಕ್ಷ ಕೊಟ್ಟ ಜವಾಬ್ದಾರಿ, ಅಧಿಕಾರವನ್ನು ಅತ್ಯಂತ ನಿಷ್ಠೆಯಿಂದ ನಿಭಾಯಿಸಿದ್ದಾರೆ. ರಾಜಕೀಯ ಹೊರತಾಗಿ ಅವರೊಬ್ಬ ಮಾನವೀಯ ಮೌಲ್ಯಗಳನ್ನೊಳಗೊಂಡ ನಾಯಕರಾಗಿದ್ದಾರೆ. ಸಾಮೂಹಿಕ ವಿವಾಹ, ಧಾರ್ಮಿಕ, ಶೈಕ್ಷಣಿಕ, ಸಾಮಾಜಮುಖಿ ಕಾರ್ಯಗಳಿಗೆ ಕೊಡುಗೈ ದಾನಿಯಾಗಿದ್ದಾರೆ. ಗದಗ ಜಿಲ್ಲೆಗೆ ಅವರ ಕೊಡುಗೆ ಅಪಾರವಾಗಿದೆ ಎಂದರು.

ಈ ವೇಳೆ ಗಂಗಾಧರ ಮೆಣಸಿನಕಾಯಿ, ಪ್ರವೀಣ ಬೋಮಲೆ, ನಿಂಬಣ್ಣ ಮಡಿವಾಳರ, ಹನಮಂತ ಜಾಲಿಮರದ, ಸುರೇಶ ಸಾಸಲವಾಡ, ಶಿವು ಪಶುಪತಿಹಾಳ, ರಮೇಶ ಲಮಾಣಿ, ಸಂತೋಷ ರಾಠೋಡ ಸೇರಿ ಶಾಲೆಯ ಶಿಕ್ಷಕ ಸಿಬ್ಬಂದಿ, ವಿದ್ಯಾರ್ಥಿಗಳಿದ್ದರು.

# ನಾಯಿಗಳ ದಾಳಿಯಿಂದ ಜಿಂಕೆ ರಕ್ಷಣೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ತಾಲೂಕಿನ ಸುವರ್ಣಗಿರಿ ತಾಂಡಾದ ಯುವಕರು ಯಲ್ಲಾಪುರ ಅರಣ್ಯ ಪ್ರದೇಶದಲ್ಲಿ ನಾಯಿಗಳ ದಾಳಿಗೊಳಗಾದ ಜಿಂಕೆಯನ್ನು ರಕ್ಷಿಸಿ ಮಾನವೀಯತೆ ಮೆರೆದಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಮಾಂಸದ ರುಚಿ ಕಂಡಿರುವ ನಾಯಿಗಳು ಅರಣ್ಯ ಪ್ರದೇಶದಲ್ಲಿ ಹಿಂಡು ಹಿಂಡಾಗಿ ಜಿಂಕೆ ಸೇರಿದಂತೆ ಇತರೆ ಪ್ರಾಣಿಗಳ ಮೇಲೆ ದಾಳಿ ಮಾಡಿ ರಕ್ತದ ರುಚಿ ನೋಡುತ್ತಿವೆ. ಯಲ್ಲಾಪುರ ರಸ್ತೆಯ ಆಂಜನೇಯ ದೇವಸ್ಥಾನ ಕ್ರಾಸ್ ಹತ್ತಿರ ಜಿಂ-ಕೆಯೊಂದರ ಮೇಲೆ ನಾಯಿಗಳು ದಾಳಿ ಮಾಡುತ್ತಿರುವುದನ್ನು ಗಮನಿಸಿದ ಸುವರ್ಣಗಿರಿಯ ರಾಷ್ಟ್ರೀಯ ಮಟ್ಟದ ಕ್ರಿಕೆಟ್ ಕಾಮೆಂಟೇಟರ್ ಸಂತೋಷ ಕಾರಬಾರಿ, ಕೆಎಸ್‌ಆರ್‌ಟಿಸಿ ಬಸ್ ಚಾಲಕ ಮುತ್ತಣ್ಣ ಮುಶಪ್ಪನವರ ನಾಯಿಗಳನ್ನು ಓಡಿಸಿ ಜಿಂಕೆಯನ್ನು ರಕ್ಷಿಸಿದ್ದಾರೆ.

ತೀವ್ರ ಅಸ್ವಸ್ಥಗೊಂಡಿದ್ದ ಜಿಂಕೆಯನ್ನು ಪಶು ಚಿಕಿತ್ಸಾ ಅಂಬ್ಯುಲೆನ್ಸ್ ಸಹಾಯದಿಂದ ಚಿಕಿತ್ಸೆ ಕೊಡಿಸಿದ್ದಾರೆ. ಬಳಿಕ ಪಿಎಸ್‌ಐ ಈರಣ್ಣ ರಿತ್ತಿ ಅವರ ಸಲಹೆಯಂತೆ ಅರಣ್ಯ ಇಲಾಖೆಗೆ ಒಪ್ಪಿಸಿದ್ದಾರೆ.

ಕಾಡು ಪ್ರಾಣಿ/ಪಕ್ಷಿಗಳ ಸಂರಕ್ಷಣೆಯಲ್ಲಿ ಗ್ರಾಮೀಣ ಭಾಗದ ಜನರ ಪಾತ್ರ ಮಹತ್ವದ್ದಾಗಿದೆ. ಈ ನಿಟ್ಟಿನಲ್ಲಿ ಸುವರ್ಣಗಿರಿ ತಾಂಡಾದ ಯುವಕರ ಕಾರ್ಯ ಶ್ಲಾಘನೀಯ. ಜಿಂಕೆ ಆರೋಗ್ಯವಾಗಿದ್ದು ಇನ್ನಷ್ಟು ಚಿಕಿತ್ಸೆ ಕೊಡಿಸಿ ಅರಣ್ಯಕ್ಕೆ ಬಿಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಕೈಮಗ್ಗ ದಿನಾಚರಣೆ ಅಂಗವಾಗಿ ನೇಕಾರರಿಗೆ ಸನ್ಮಾನ

■ವಿಜಯಸಾಕ್ಷಿ ಸುದ್ದಿ, ಗದಗ



ರಾಷ್ಟ್ರೀಯ ಕೈಮಗ್ಗ ದಿನಾಚರಣೆಯ ಅಂಗವಾಗಿ ವಾರ್ಡ್ ನಂ. 5ರ ನೇಕಾರ ಕಾಲೋನಿಯಲ್ಲಿ ಬಿಜೆಪಿ ಗದಗ ನಗರ ಮಂಡಳ ಮಹಿಳಾ ಮೋರ್ಚಾ ವತಿಯಿಂದ ವಿಜಯಲಕ್ಷ್ಮೀ ಮಾನ್ವಿ ನೇತೃತ್ವದಲ್ಲಿ ಹಿರಿಯ ನೇಕಾರರಾದ ಶಕುಂತಲಮ್ಮ ಕುರಹಟ್ಟಿ ಹಾಗೂ ಕಮಲಮ್ಮ ಅಳವಂಡಿ ಅವರನ್ನು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ವಿಜಯಲಕ್ಷ್ಮೀ ಮಾನ್ವಿ ಮಾತನಾಡಿ, ಅಂದಿನ ಬಿಜೆಪಿ ಸರ್ಕಾರ ರಾಷ್ಟ್ರದಲ್ಲಿ ಉತ್ತಮ ಜವಳಿ ನೀತಿ ಮಾಡಿ ಕೈಮಗ್ಗ ತಂತ್ರಜ್ಞಾನ ಸಂಸ್ಥೆ ಪ್ರಾರಂಭಿಸಲು ನಿರ್ಧರಿಸಿತು. ಅದರ ಪ್ರತಿಫಲವಾಗಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಆಡಳಿತ ಅವಧಿಯಲ್ಲಿ ರಾಜ್ಯದಲ್ಲಿಯೇ ಏಕೈಕ ಕೈಮಗ್ಗ ಸಂಸ್ಥೆ ಗದಗ ಜಿಲ್ಲೆಯಲ್ಲಿ ಸ್ಥಾಪನೆಯಾಯಿತು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸ್ವಂತ ಮನೆ ಇಲ್ಲದ ಕೈಮಗ್ಗ ಮಹಿಳಾ ನೇಕಾರರು ಮನೆಗಾಗಿ ಮನವಿ ಮಾಡಿಕೊಂಡರು. ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ನಿರ್ಮಲಾ ಕೊಳ್ಳಿ, ನಗರಸಭೆ ಸದಸ್ಯರಾದ ಲಕ್ಷ್ಮೀ ಕಾಕಿ, ಸುಜಾತಾ ಕಾಡಪ್ಪನವರ, ಶಂಕರ ಕಾಕಿ, ಪದ್ಮಕ್ಕ ಕರರ್ಜಗಿ, ಗೀತಾ ಕರೆಕಲ್ಲ, ಸವಿತಾ ಅಸುಂಡಿ, ರೇಖಾ ಪದ್ಮಸಾಲಿ, ಮಂಜುಳಾ ಜಾಲಣ್ಣವರ, ಮನೋಹರ ಕಡಿವಾಳ, ಯಲ್ಲಪ್ಪ ಕುಣಿ, ನಾರಾಯಣ ಗಾಯಕವಾಡ ಮುಂತಾದವರು ಉಪಸ್ಥಿತರಿದ್ದರು.

# ಶ್ರೀ ಸೋಮನಾಥ ಚರಿತ್ರೆ ಪುರಾಣ ಆ.10ರಿಂದ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಪಟ್ಟಣದ ಸೋಮೇಶ್ವರ ದೇವಸ್ಥಾನದಲ್ಲಿ ಶ್ರೀ ರಾಘವಾಂಕ ಕವಿ ವಿರಚಿತ ಶ್ರೀ ಸೋಮನಾಥ ಚಾರಿತ್ರ ಪುರಾಣ ನಡೆಸಲು ನಿರ್ಧರಿಸಲಾಗಿದೆ ಎಂದು ಶ್ರೀ ಸೋಮೇಶ್ವರ ದೇವರ ಭಕ್ತರ ಸೇವಾ ಟ್ರಸ್ಟ್ ಕಮಿಟಿ ಅಧ್ಯಕ್ಷ ಚಂಬಣ್ಣ ಬಾಳಿಕಾಯಿ ಹೇಳಿದರು.

ಅವರು ದೇವಸ್ಥಾನದಲ್ಲಿ ನಡೆಸಿದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಶ್ರೀ ಸೋಮೇಶ್ವರ ಪುರಾಣ ಸಮಿತಿ ಸದಸ್ಯರಾದ ಜಿ.ಎಸ್. ಗುಡಗೇರಿ ಹಾಗೂ ಜಯಣ್ಣ ಹೊಟ್ಟಿ ಮಾತನಾಡಿ, 13ನೇ ವರ್ಷದ ಪುರಾಣ ಪ್ರಾರಂಭೋತ್ಸವವು ಆ.10ರಂದು ದೇವಸ್ಥಾನದಲ್ಲಿ ಪ್ರಾರಂಭವಾಗಲಿದೆ. ಅಂದು ಸಂಜೆ 4ಕ್ಕೆ ಪಟ್ಟಣದ ಕೆಇಬಿಯ ಆವರಣದ ಗಣೇಶ ದೇವಸ್ಥಾನದಿಂದ ಶೃಂಗರಿಸಿದ ಎತ್ತಿನ ಬಂಡಿಯಲ್ಲಿ ಕಂಸಾಳೆ ತಂಡ, ಪ್ರಮುಖ ಭಜನಾ ಸಂಘಗಳು, ಸಕಲವಾದ್ಯಗಳಿಂದ ಶ್ರೀ ಸೋಮೇಶ್ವರ ಚರಿತ್ರೆ ಗ್ರಂಥದ ಮೆರವಣಿಗೆ ನಡೆಯಲಿದೆ. ಸಂಜೆ 7.30ಕ್ಕೆ ಪುರಾಣ ಪ್ರಾರಂಭೋತ್ಸವಗೊಳ್ಳಲಿದೆ. ಹೂವಿನಶಿಗ್ಲಿ ವೀರಕ್ತಮಠದ ಶ್ರೀ ಚನ್ನವೀರ ಮಹಾಸ್ವಾಮಿಗಳು, ಕರೆವಾಡಿಮಠದ ಮಳೆ ಮಲ್ಲಿಕಾರ್ಜುನ ಶಿವಾಚಾರ್ಯರು ಸಾನಿಧ್ಯವಹಿಸುವರು.

ವರ್ತಕ ಬಸವೇಶ ಮಹಾಂತಶೆಟ್ಟರ ಉದ್ಘಾಟಿಸುವರು. ಪ್ರಶಾಂತ ನೆಲವಿಗಿ, ಸೋಮಣ್ಣ ಪೂಜಾರ ಸೇರಿ ಹಲವರು ಉಪಸ್ಥಿತರಿರುವರು. ಪಟ್ಟದಕಲ್ಲಿನ ವಿರುಪಾಕ್ಷ ಗವಾಯಿಗಳು ಪುರಾಣ ಪಠಣ, ನಿ.ಶಿಕ್ಷಕ ಎಸ್.ಎಫ್. ಆದಿ ಪುರಾಣ ಪ್ರವಚನ ಮಾಡುವರು. ರಾಜ್ಯಪ್ರಶಸ್ತಿ ಪುರಸ್ಕೃತ ಕಳಕಪ್ಪ ಮುದ್ನಾಪುರ ತಬಲಾ ಸಾಥ್ ನೀಡುವರು. 1 ತಿಂಗಳ ಕಾಲ ನಡೆಯುವ ಈ ಪುರಾಣ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಈ ವೇಳೆ ಸುರೇಶ ರಾಚನಾಯ್ಕರ, ಬಸವನಗೌಡ ಪಾಟೀಟ, ವಿರೂಪಾಕ್ಷಪ್ಪ ಆದಿ, ಚನ್ನಪ್ಪ ಆದಿ, ರಾಜಶೇಖರ ಶಿಗ್ಲಿಮಠ, ಪರಪ್ಪ ಉಮಚಗಿ, ನಾಗರಾಜ ಕಳಸಾಪುರಸೋಮಶೇಖರ ಕೆರಿಮನಿ, ಬಸವರಾಜ ಮೆಣಸಿನಕಾಯಿ, ಸೋಮಣ್ಣ ತಂಡಿಗೇರ, ಮಯೂರ ಪಾಟೀಲ, ನಂದೀಶ ಬಂಡಿವಾಡ, ಸುರೇಶ ಚೌಕನವರ, ಚಂದ್ರಶೇಖರ ಹೂಗಾರ ಮುಂತಾದವರಿದ್ದರು.

ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತದಿಂದ

# ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ವೀರಶೈವ-ಲಿಂಗಾಯತ ಜಾತಿ ಹಾಗೂ ಉಪಜಾತಿಗೆ ಸೇರಿದ ಸಮುದಾಯದ ಜನರ (ಪ್ರವರ್ಗ-3ಬಿ) ಅಭಿವೃದ್ಧಿಗಾಗಿ 2024-25ನೇ ಸಾಲಿನಲ್ಲಿ ಶೈಕ್ಷಣಿಕ ಸಾಲ ಯೋಜನೆ, ಜವಜಲ ಯೋಜನೆ, ಭೋಜನಾಲಯ ಕೇಂದ್ರ, ವಿಭೂತಿ ನಿರ್ಮಾಣ ಘಟಕ, ಸ್ವಾವಲಂಬಿ ಸಾರಥಿ ಯೋಜನೆ, ಸ್ವಯಂ ಉದ್ಯೋಗ ಸಾಲ ಯೋಜನೆ, ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆಗಳಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಆಗಸ್ಟ್ 31 ಕೊನೆಯ ದಿನವಾಗಿದೆ. ಅರ್ಜಿದಾರರು ತಮ್ಮ ಆಧಾರ್ ಸಂಖ್ಯೆಗೆ ಮೊಬೈಲ್ ಸಂಖ್ಯೆಯನ್ನು ಜೋಡಣೆ ಮಾಡಿರಬೇಕು ಹಾಗೂ ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆಯನ್ನು ಸೀಡ್ ಮಾಡಿರಬೇಕು. ನಿಗಮವು ಅನುಷ್ಠಾನಗೊಳಿಸುವ ಈ ಮೇಲ್ಕಂಡ ಯೋಜನೆಗಳಲ್ಲಿ ಸರ್ಕಾರದ ವಿವೇಚನಾ ಕೋಟಾ ಮತ್ತು ನಿಗಮದ ಅಧ್ಯಕ್ಷರು/ ನಿರ್ದೇಶಕರ ಮಂಡಳಿಯ ವಿವೇಚನಾ ಕೋಟಾದಡಿ ಸೌಲಭ್ಯ ಪಡೆಯಬಯಸುವವರೂ ಸಹ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬಹುದು. ಒಂದು ಕುಟುಂಬದ ಒಬ್ಬ ಸದಸ್ಯರು ಮಾತ್ರ ಮೇಲ್ಕಂಡ ಯಾವುದಾದರೂ ಒಂದು ಯೋಜನೆಯಲ್ಲಿ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

ಅರ್ಹ ಫಲಾಪೇಕ್ಷಿಗಳು ಗ್ರಾಮ ಒನ್, ಬೆಂಗಳೂರು ಒನ್, ಕರ್ನಾಟಕ ಒನ್ ನಾಗರಿಕ ಸೇವಾ ಕೇಂದ್ರಗಳಲ್ಲಿ ದಾಖಲೆಗಳೊಂದಿಗೆ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬೇಕಾಗಿರುತ್ತದೆ. 2023-24ನೇ ಸಾಲಿಗೆ ಅರ್ಜಿ ಸಲ್ಲಿಸಿ ಆಯ್ಕೆಯಾಗದವರು ಅದೇ ಯೋಜನೆಗೆ ಈ ವರ್ಷ ಮರು ಅರ್ಜಿ ಸಲ್ಲಿಸುವ ಅಗತ್ಯತೆ ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ನಿಗಮದ ಜಾಲತಾಣ https://kvldcl.karnataka.gov.in ಅಥವಾ ನಿಗಮದ ದೂರವಾಣಿ ಸಂಖ್ಯೆ 080 22865522/ 9900012351 ಅನ್ನು ಸಂಪರ್ಕಿಸಬಹುದು ಅಥವಾ ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ಕಚೇರಿಗಳನ್ನು ಸಂಪರ್ಕಿಸಬಹುದಾಗಿದೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka